# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 192 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 01.02.2025 • ಶನಿವಾರ • ಪುಟ:04 • ಬೆಲೆ:2
Volume:02 • Issue: 192 • PRGI No:KARKAN/2023/88055 • VIJAYANAGARA • 01.02.2025 • Saturday • Page:04 • Rs:2




ಓದುಗರ ಬೆರಳ ತುದಿಗೆ ನಿಮ್ಮ ಬ್ರಾಂಡ್, ನಿಮ್ಮ ವ್ಯವಹಾರ, ಸೇವೆ/ವಿಶೇಷ ಕೊಡುಗೆಗಳನ್ನು ಹಂಪಿ ಟೈಮ್ಸ್ ಮೂಲಕ ಹೆಚ್ಚು ಓದುಗರಿಗೆ ತಲುಪಿಸಿ.

1,10,000+
Digital E-PAPER READERS



No.1 HAMPI TIMES LEADING VIJAYANAGARA District News Paper

Contact for Advertisements: 9448633038





## ದೇವಾಲಯ ದರ್ಶನ




ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಆನಂದ ಬಾಣ




# ಹಂಪಿ ಉತ್ಸವಕ್ಕೆ ಚುರುಕುಗೊಂಡ ಸಿದ್ಧತೆ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹಂಪಿಗೆ ಭೇಟಿ, ವೇದಿಕೆ ನಿರ್ಮಾಣ, ಪಾರ್ಕಿಂಗ್ ಸ್ಥಳ ಪರಿಶೀಲನೆ ಸ್ವಚ್ಛತೆಗೆ ಸೂಚನೆ

## ಧ್ವನಿ ಮತ್ತು ಬೆಳಕು ಸೇರಿ 5 ವೇದಿಕೆ ನಿರ್ಮಾಣದ ಸ್ಥಳ ಹಾಗೂ ಜಾನುವಾರು, ಶ್ವಾನ-ಟಗರು ಶೋ ಸ್ಥಳ ವೀಕ್ಷಣೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವಕ್ಕೆ ದಿನಗಣನೆ ಆರಂಭವಾಗಿದೆ. ಫೆ.28, ಮಾ.1 ಮತ್ತು 2 ರಂದು ನಡೆಯುವ ಹಂಪಿ ಉತ್ಸವವನ್ನು ಈ ಬಾರಿ ಕಳೆದಬಾರಿಗಿಂತಲೂ ಅದ್ದೂರಿಯಾಗಿ ಆಚರಿಸಬೇಕೆಂಬ ಜಿಲ್ಲಾ ಉಸ್ತುವಾರಿ ಸಚಿವ ಬಿ.ಝಡ್. ಜಮೀರ್ ಅಹ್ಮದ್ ಖಾನ್ ಆಶಯದಂತೆ ಜಿಲ್ಲಾಡಳಿತ ಕಾರ್ಯೋನ್ಮುಖವಾಗಿದೆ.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಅಧಿಕಾರಿಗಳೊಂದಿಗೆ ಶುಕ್ರವಾರ ಹಂಪಿಗೆ ಭೇಟಿ ನೀಡಿ, ಹಂಪಿ ಪ್ರಕಾಶನಗರದ ಬಳಿ ಮುಖ್ಯವೇದಿಕೆ, ತೇರುಬೀದಿ ಎದುರುಬಸವಣ್ಣ ಮಂಟಪ, ಶ್ರೀವಿರೂಪಾಕ್ಷೇಶ್ವರ ದೇವಸ್ಥಾನದೊಳಗೆ ಹಾಗೂ ಕಡಲೆ-ಸಾಸಿವೆ ಕಾಳು ಗಣೇಶ ಆವರಣದಲ್ಲಿ ವೇದಿಕಗಳ ನಿರ್ಮಾಣದ ಸ್ಥಳಗಳನ್ನು, ಮಳಿಗೆಗಳ ಸ್ಥಳವನ್ನು ಪರಿಶೀಲಿಸಿದರು. ನಂತರ ಹಂಪಿಯ ಗತವೈಭವವನ್ನು ಸಾರುವ ಜನಾಕರ್ಷಿತ ಧ್ವನಿ ಮತ್ತು ಬೆಳಕು ಕಾರ್ಯಕ್ರಮ ನಡೆಯುವ ಕಮಲ್ ಮಹಲ್ ಹಿಂಭಾಗದ ಗಜಾಲಯಕ್ಕೂ ಭೇಟಿ ನೀಡಿ ಸ್ಥಳ ಪರಿಶೀಲಿಸಿದರು. ಜಾನುವಾರು ಪ್ರದರ್ಶನ,



ಡಾಗ್ ಮತ್ತು ಟಗರ್ ಶೋ ನಡೆಯುವ ಸ್ಥಳಗಳನ್ನು ಪರಿಶೀಲಿಸಿ ಸ್ವಚ್ಚತೆ ಕೈಗೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಶ್ರೀಕೃಷ್ಣ ದೇವಸ್ಥಾನ ಪಕ್ಕದಲ್ಲಿ ಸೇರಿದಂತೆ ಕಳೆದ ಬಾರಿ ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದ್ದ ಸ್ಥಳ ವೀಕ್ಷಿಸಿ ಅಗತ್ಯ ಸಿದ್ಧತೆ ಕೈಗೊಳ್ಳಲು ಸೂಚಿಸಿದರು.

ಟ್ರಾಫಿಕ್ ಜಾಮ್ ಆಗದಂತೆ ಮುಂಜಾಗ್ರತ ಕ್ರಮವಾಗಿ ಅಗತ್ಯ ಸಿದ್ಧತೆ

ತೇರು ಬೀದಿ, ಎದುರು ಬಸವಣ್ಣ ವೇದಿಕೆ ಸ್ಥಳಗಳ ವೀಕ್ಷಣೆ ಮಾಡಿದರು. ಕಳೆದ ಬಾರಿಗಿಂತ ಅಧಿಕ ಜನರು ಆಗಮಿಸುವ ನಿರೀಕ್ಷೆಯಲ್ಲಿರುವ ಜಿಲ್ಲಾಡಳಿತ ಈ ಬಾರಿಯ ಉತ್ಸವಕ್ಕೆ ಆಕರ್ಷಿಸಲು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲು ಮುಂದಾಗಿದೆ.

ಹಂಪಿ ಗ್ರಾಪಂ ಅಧ್ಯಕ್ಷೆ ರಜಿನಿ ಷಣ್ಮುಖಗೌಡ, ಮಲಪನಗುಡಿ ಗ್ರಾಪಂ ಅಧ್ಯಕ್ಷೆ ಸೀತಮ್ಮ, ಜಿಪಂ ಸಿಇಒ ಎನ್.ಎಂ. ಅಕ್ರಮ್ ಅಲಿ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು, ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ, ಸಹಾಯಕ ಆಯುಕ್ತರಾದ ವಿವೇಕಾನಂದ, ನಗರಸಭೆ ಪೌರಾಯುಕ್ತ ಮನೋಹರ್, ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ ಪ್ರಭುಲಿಂಗಪ್ಪ ತಳಕೇರಿ, ತಹಸೀಲ್ದಾರ ಎಂ.ಶೃತಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಲೀಂ ಪಾಷಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ್ ರಂಗಣ್ಣನವರ್, ಡಿವೈಎಸ್ಪಿ ಮಂಜುನಾಥ ಇತರರಿದ್ದರು.

# ಹಂಪಿ ನೆರೆಹೊರೆಯ ಸ್ಥಳೀಯರ ಸಹಕಾರದಿಂದಲೇ ಹಂಪಿ ಉತ್ಸವ ಯಶಸ್ವಿ ಸಾಧ್ಯ : ಡಿಸಿ





■ **ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವ ಯಶಸ್ವಿಗೆ ಹಂಪಿಯ ನೆರೆಹೊರೆಯ ಗ್ರಾಮಸ್ಥರು, ಸ್ಥಳೀಯ ಜನಪ್ರತಿನಿಧಿಗಳ ಸಹಕಾರ ಅಗತ್ಯ, ಈ ನಿಟ್ಟಿನಲ್ಲಿ ಸ್ಥಳೀಕರ ಭಾಗವಹಿಸುವಿಕೆ ಮುಖ್ಯವಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.

ಕಮಲಾಪುರ ಪಟ್ಟಣದಲ್ಲಿನ ಮಯೂರ ಭುವನೇಶ್ವರಿ ಹೊಟೇಲ್‌ನಲ್ಲಿ ಜಿಲ್ಲಾಡಳಿತದಿಂದ ಏರ್ಪಡಿಸಿದ್ದ ಹಂಪಿ ಗ್ರಾಪಂ, ಮಲಪನಗುಡಿ ಗ್ರಾಪಂ ಹಾಗೂ ಕಮಲಾಪುರ ಪಟ್ಟಣ ಪಂಚಾಯಿತಿಯ ಜನಪ್ರತಿನಿಧಿಗಳು ಮತ್ತು ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಹಂಪಿ ಉತ್ಸವ ಪೂರ್ವಸಿದ್ಧತಾ ಸಲಹಾ ಸಭೆಯ ಅಧ್ಯಕ್ಷತೆ ವಹಿಸಿ ಶುಕ್ರವಾರ ಮಾತನಾಡಿದರು. ಹಿಂದಿನ ವರ್ಷದ ಉತ್ಸವದ ಯಶಸ್ವಿಗೆ ಸ್ಥಳೀಯರ ಸಹಕಾರವೇ ಮುಖ್ಯವಾಗಿದೆ. ಈ ಭಾಗದ ರೈತರು ತಮ್ಮ ಜಮೀನುಗಳನ್ನು ತೆರವುಗೊಳಿಸಿ ಹಂಪಿ ಉತ್ಸವದ ತಯಾರಿಗೆ ಜಾಗ ನೀಡಿ ಸಹಕರಿಸಿದ್ದಕ್ಕೆ ರಾಜ್ಯಾದ್ಯಾಂತ ಬರುವ ಎಲ್ಲಾ ಜನರಿಗೆ ವಾಹನ ಪಾರ್ಕಿಂಗ್ ಸೇರಿದಂತೆ ವಿವಿಧ ವೇದಿಕೆಗಳ ನಿರ್ಮಾಣಕ್ಕೆ ಸಹಕಾರವಾಗಿದೆ. ಈ ಬಾರಿಯು ಜಿಲ್ಲಾಡಳಿತದ ಜತೆಗೆ ಎಲ್ಲರೂ ಕೈಜೋಡಿಸಬೇಕಿದೆ. ಉತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಳೀಯ ಗ್ರಾಮಸ್ಥರು ಕುಟುಂಬ ಸಹಿತವಾಗಿ ಆಗಮಿಸಿ ಎಲ್ಲಾ ಕಾರ್ಯಕ್ರಮ ವೀಕ್ಷಣೆ ಮಾಡಬೇಕೆಂದು ತಿಳಿಸಿದರು.

ಸಭೆಗೆ ಆಗಮಿಸಿದ್ದ ಜನಪ್ರತಿನಿಧಿಗಳು ಮಾತನಾಡಿ, ಕಮಲಾಪುರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಾಯಿಗಳು, ಬಿಡಾಡಿ ದನಗಳ ಹಾವಳಿ ಇದೆ. ನಿಯಂತ್ರಣಕ್ಕೆ ಮುಂದಾಗಬೇಕು, ಇಲ್ಲವಾದಲ್ಲಿ ಉತ್ಸವಕ್ಕೆ ಆಗಮಿಸಿದ ಯಾತ್ರಿಕರಿಗೆ ತೊಂದರೆಯಾಗದಂತೆ ಮುನ್ನೆಚರಿಕೆ ವಹಿಸಬೇಕಿದೆ. ಉತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಳೀಯ ಕಲಾವಿದರಿಗೆ ಅದರಲ್ಲೂ ನೈಜ ಕಲಾವಿದರಿಗೆ ಅವಕಾಶ ನೀಡಿ ಆಗಮಿಸಿದ ಪ್ರೇಕ್ಷಕರಿಗೆ ಮನೋರಂಜನೆ ನೀಡಲು ಅವಕಾಶ ನೀಡಬೇಕು. ಉತ್ಸವದಲ್ಲಿ ಕಡ್ಡಾಯವಾಗಿ ದಿ.ಎಂ.ಪಿ.ಪ್ರಕಾಶ್‌ರವರ ಹೆಸರಿನಲ್ಲಿ ವೇದಿಕೆ ನಿರ್ಮಿಸುವಂತೆ ಮನವಿ ಮಾಡಿದರು. ಹಂಪಿ ಸ್ಮಾರಕಗಳಿಗೆ ಹಾನಿಯಾಗದಂತೆ ಸಿಸಿ ಕ್ಯಾಮೆರಾ ಮತ್ತು ವಿದ್ಯುತ್ ದೀಪ ಅಳವಡಿಸುವಂತೆ ಸೂಚಿಸಲಾಯಿತು. ಅನೆಗುಂದಿಯ ರಾಜವಂಶಸ್ಥರನ್ನು ಕಾರ್ಯಕ್ರಮಕ್ಕೆ ಗೌರವಾನ್ವಿತವಾಗಿ ಅಹ್ವಾನಿಸಲು ಸಲಹೆ ನೀಡಿದರು. ಬಳ್ಳಾರಿ, ಕೊಪ್ಪಳ ಜಿಲ್ಲೆಗಳಿಂದ ಹೆಚ್ಚು ಜನರು ಆಗಮಿಸುವ ನಿಟ್ಟಿನಲ್ಲಿ ಸೂಕ್ತ ಬಸ್ ಸಂಪರ್ಕ ಕಲ್ಪಿಸಲು, ಸ್ವಚ್ಛತೆ, ಮಹಿಳೆಯರಿಗೆ ಶೌಚಾಲಯ ವ್ಯವಸ್ಥೆ, ರಸ್ತೆ ಮಾರ್ಗ ದುರಸ್ಥಿಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಸಲಹೆ ನೀಡಿದರು. ಹಂಪಿ ಗ್ರಾಪಂ ಅಧ್ಯಕ್ಷೆ ರಜಿನಿ ಷಣ್ಮುಖಗೌಡ, ಮಲಪನಗುಡಿ ಗ್ರಾಪಂ ಅಧ್ಯಕ್ಷೆ ಸೀತಮ್ಮ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು, ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಸೇರಿದಂತೆ ಅಧಿಕಾರಿಗಳಿದ್ದರು.

## ಮೈಕ್ರೋ ನ್ಯೂಸ್

### ಖಾಲಿ ಇರುವ ಸ್ವಯಂ ಸೇವಕ ಗೃಹರಕ್ಷಕರ ನೋಂದಣಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲಾ ಗೃಹರಕ್ಷಕ ದಳದ ನೂತನ ಸ್ವಯಂ ಸೇವಕ ಗೃಹರಕ್ಷಕರ ನೋಂದಣಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲಾ ಗೃಹರಕ್ಷಕ ದಳದಲ್ಲಿ ಪ್ರಸ್ತುತ ಖಾಲಿ ಇರುವ ಹೊಸಪೇಟೆ, ಕಮಲಾಪುರ, ಹಗರಿಬೊಮ್ಮನಹಳ್ಳಿ, ಹಡಗಲಿ ಹಾಗೂ ಹಲವಾಗಲು ಘಟಕಗಳಲ್ಲಿ ಪ್ರಸ್ತುತ ಖಾಲಿ ಇರುವ ಸ್ವಯಂ ಸೇವಕ ಗೃಹರಕ್ಷಕ, ಗೃಹರಕ್ಷಕಿಯರ ನೋಂದಣಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಭರ್ತಿ ಮಾಡಿ ಫೆ.10 ರೊಳಗಾಗಿ, ಗೃಹರಕ್ಷಕ ದಳ ಜಿಲ್ಲಾ ಸಮಾದೇಷ್ಟರ ಕಚೇರಿಯಲ್ಲಿ ಸಲ್ಲಿಸಬಹುದಾಗಿದೆ ಎಂದು ಗೃಹರಕ್ಷಕ ದಳದ ಜಿಲ್ಲಾ ಸಮಾದೇಷ್ಟರರಾದ ಬಸವರಾಜ ಅಗಸರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com


# ರಸ್ತೆ ಸಂಚಾರಿ ನಿಯಮ ಪಾಲಿಸಿ ಅಮೂಲ್ಯ ಜೀವ ಉಳಿಸಿ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿಕೆ। ಸಡಕ ಸುರಾಕ್ಷಾ, ಜೀವನ ರಕ್ಷಾ ಜಾಗೃತಿ ಜಾಥಾಕ್ಕೆ ಚಾಲನೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಅಮೂಲ್ಯ ಜೀವಗಳನ್ನು ಉಳಿಸಲು ಸಂಚರಿಸುವಾಗ ಪ್ರತಿಯೊಬ್ಬರು ಸಂಚಾರಿ ನಿಯಮಗಳನ್ನು ಕರ್ತವ್ಯವೆಂದು ಪಾಲಿಸಬೇಕಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.

ನಗರದ ಗಾಂಧಿ ಚೌಕ ಬಳಿ ಪ್ರಾದೇಶಿಕ ರಸ್ತೆ ಸಾರಿಗೆ ಇಲಾಖೆ ಏರ್ಪಡಿಸಿದ್ದ ರಸ್ತೆ ಸುರಕ್ಷತಾ ಮಾಸಾಚರಣೆ ನಿಮಿತ್ತ 'ಸಡಕ್ ಸುರಕ್ಷಾ-ಜೀವನ ರಕ್ಷಾ' ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಶುಕ್ರವಾರ ಅವರು ಮಾತನಾಡಿದರು.

ರಸ್ತೆ ಸುರಕ್ಷತಾ ನಿಯಮಗಳನ್ನು ಪಾಲನೆ ಮಾಡದಿರುವುದೇ ರಸ್ತೆ ಅಪಘಾತಗಳಿಗೆ ಮುಖ್ಯ ಕಾರಣವಾಗಿದೆ. ರಸ್ತೆಯಲ್ಲಿ ಸಂಚರಿಸುವಾಗ ಅತಿ ವೇಗದ ಚಾಲನೆ, ಮದ್ಯಪಾನ ಮಾಡಿ ವಾಹನ ಚಲಾಯಿಸುವುದು, ಮೊಬೈಲ್ ಫೋನ್ ಬಳಕೆ ಮಾಡುತ್ತಾ ವಾಹನ




ಚಲಾಯಿಸುವುದು, ರೆಡ್ ಸಿಗ್ನಲ್ ಇದ್ದಾಗಲೂ ಕ್ರಾಸಿಂಗ್ ಮಾಡಲು ಯತ್ನಿಸುವುದು, ಹೆಲ್ಮೆಟ್ ಧರಿಸದೇ, ಸೀಟ್ ಬೆಲ್ಟ್ ಹಾಕದೇ ವಾಹನ ಚಲಾಯಿಸುವುದು ಸೇರಿದಂತೆ ಸಂಚಾರಿ ನಿಯಮಗಳ ನಿರ್ಲಕ್ಷ್ಯದಿಂದಾಗಿ ಅನೇಕ ಅಪಘಾತಗಳು ಸಂಭವಿಸಿ ಜೀವ ಹಾನಿಯಾಗಿರುವ ಪ್ರಕರಣಗಳು ಹೆಚ್ಚಾಗುತ್ತಿವೆ.

ಈ ಬಗ್ಗೆ ಜನಸಾಮಾನ್ಯರಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವ ಮೂಲಕ ರಸ್ತೆ ಅಪಘಾತಗಳನ್ನು ನಿಯಂತ್ರಿಸುವ ಹಿತದೃಷ್ಟಿಯಿಂದ ಜಾಗೃತಿ ಜಾಥಾದ ಮೂಲಕ ಅರಿವು ಮೂಡಿಸಬೇಕಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಬಿ.ಎಲ್ ಮಾತನಾಡಿ, ಜಿಲ್ಲೆಯಲ್ಲಿ 275 ಸಾರ್ವಜನಿಕ ರಸ್ತೆ ಅಪಘಾತ ಪ್ರಕರಣಗಳು ದಾಖಲಾಗಿವೆ. ಒಂದು ನಿಮಿಷದ ನಿರ್ಲಕ್ಷ್ಯತನ ಒಂದು ಅಮೂಲ್ಯ ಜೀವವನ್ನು ಬಲಿ ತೆಗೆದುಕೊಳ್ಳಲಿದೆ. ಪ್ರತಿಯೊಬ್ಬರು ರಸ್ತೆಯಲ್ಲಿ ಸಂಚರಿಸುವ ವೇಳೆ ಯಾವುದೇ ಅಪಘಾತಗಳು ಕಂಡು ಬಂದರೇ ಶೀಘ್ರ ಗಾಯಾಳುಗಳನ್ನು ಹತ್ತಿರದ ಆಸ್ಪತ್ರೆಗೆ ದಾಖಲಿಸುವುದು ಮುಖ್ಯವಾಗಿದೆ. ಅಪಘಾತ ವೇಳೆಯಲ್ಲಿ ಆಸ್ಪತ್ರೆಗೆ ದಾಖಲಿಸಿದವರ ಹೆಸರು, ವಿಳಾಸದ ಅಗತ್ಯವಿಲ್ಲ. ಮಾನವೀಯತೆಯನ್ನು ಮರೆಯದೆ ಅಪಘಾತವಾದವರನ್ನು ರಕ್ಷಿಸಲು ಎಲ್ಲರೂ ಮುಂದಾಗಬೇಕು ಎಂದರು.


ಪದ್ಮಶ್ರೀ ಪುರಸ್ಕೃತೆ ಮಾತಾ >> 4


# 5 ಲಕ್ಷ ರೂ. ಮೌಲ್ಯದ 25 ಮೊಬೈಲ್ ಜಪ್ತಿ

## ಕೊಟ್ಟೂರು ಪೊಲೀಸರ ಪತ್ತೆ ಕಾರ್ಯಾಚರಣೆಗೆ ಎಸ್ಪಿ ಶ್ರೀಹರಿಬಾಬು ಪ್ರಶಂಸೆ



■ **ಹಂಪಿ ಟೈಮ್ಸ್ ಕೊಟ್ಟೂರು.**

ಕೊಟ್ಟೂರು ಪೋಲೀಸ್ ಠಾಣೆಯಲ್ಲಿ ಸಿ.ಇ.ಐ.ಆರ್ ಪೋರ್ಟಲ್ ಮೂಲಕ ದಾಖಲಾದ ಪ್ರಕರಣಗಳ ತನಿಖೆ ಕೈಗೊಂಡ ಪೊಲೀಸರು 5 ಲಕ್ಷ ರೂ.ಬೆಲೆ ಬಾಳುವ 25 ಮೊಬೈಲ್‌ಗಳನ್ನ ಜಪ್ತಿ ಮಾಡಿದ್ದಾರೆ. ಕೂಡ್ಲಿಗಿ ಡಿವೆಎಸ್ಪಿ ಮಲ್ಲೇಶಪ್ಪ ಮಲ್ಲಾಪುರ ಮಾರ್ಗದರ್ಶನದಲ್ಲಿ ಸಿಪಿಐ ವೆಂಕಟಸ್ವಾಮಿ ಟಿ.ನೇತೃತ್ವದಲ್ಲಿ ಕೊಟ್ಟೂರು ಪಿಎಸ್ಐ ಗೀತಾಂಜಲಿ ಶಿಂಧೆ ಮತ್ತು ಸಿಬ್ಬಂದಿಗಳು ಬಸವರಾಜ್, ವೀರೇಶ್ ಹಾಗೂ ಶಶಿಧರ್ ತಂಡದೊಂದಿಗೆ ಕಾರ್ಯಾಚರಣೆ ಕೈಗೊಂಡು ವಿವಿಧ ಕಂಪನಿಯ 25 ಮೊಬೈಲ್ ಗಳನ್ನ ಜಪ್ತಿ ಮಾಡಿದ್ದಾರೆ. ಮೊಬೈಲ್ ಕಳೆದು ಕೊಂಡು ದೂರು ದಾಖಲಿಸಿದ ದೂರುದಾರರಿಗೆ ಪರಿಶೀಲಿಸಿ ಮೊಬೈಲ್‌ಗಳನ್ನು ನೀಡಲಾಗಿದೆ. ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕೊಟ್ಟೂರು ಪೊಲೀಸರ್ ಪತ್ತೆ ಕಾರ್ಯಾಚರಣೆಗೆ ವಿಜಯನಗರ ಜಿಲ್ಲಾ ವರಿಷ್ಠಾಧಿಕಾರಿಗಳು ಶ್ರೀಹರಿಬಾಬು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

## ಸ್ಟುಡೆಂಟ್ ಕಾಲಂ

# ತಪ್ಪು ತಿದ್ದಿಕೊಳ್ಳೋಣ



ಒಂದು ಊರಿನಲ್ಲಿ ಒಬ್ಬ ಗುರುಗಳು ತಮ್ಮ ಆಶ್ರಮದಲ್ಲಿ ಹಲವಾರು ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡುತ್ತಿದ್ದರು. ಗುರುಗಳು ತಮ್ಮ ವಿದ್ಯಾರ್ಥಿಗಳಿಗೆ ಕೇವಲ ಪುಸ್ತಕ ಜ್ಞಾನವನ್ನು ಮಾತ್ರವಲ್ಲದೆ, ಜೀವನದ ಮೌಲ್ಯಗಳನ್ನು ಮತ್ತು ಸತ್ಯವನ್ನು ಸಹ ಕಲಿಸುತ್ತಿದ್ದರು.

ಒಬ್ಬ ವಿದ್ಯಾರ್ಥಿ ಪ್ರತಿದಿನ ಬೆಳಿಗ್ಗೆ ಬೇಗನೆ ಎದ್ದು ತನ್ನ ಎಲ್ಲಾ ಕೆಲಸಗಳನ್ನು ಮುಗಿಸಿ ಗುರುಗಳಿಗೆ ಸಹಾಯ ಮಾಡುತ್ತಿದ್ದನು. ಅವನು ಯಾವಾಗಲೂ ತನ್ನ ಪಾಠಗಳನ್ನು ಚೆನ್ನಾಗಿ ಓದುತ್ತಿದ್ದನು ಮತ್ತು ಗುರುಗಳು ಹೇಳಿದ ಎಲ್ಲಾ ಮಾತುಗಳನ್ನು ಗಮನವಿಟ್ಟು ಕೇಳುತ್ತಿದ್ದನು. ಮತ್ತೊಬ್ಬ ವಿದ್ಯಾರ್ಥಿ ಸೋಮಾರಿ ಮತ್ತು ನಿರ್ಲಕ್ಷ್ಯದವನಾಗಿದ್ದನು. ಅವನು ಯಾವಾಗಲೂ ತಡವಾಗಿ ಏಳುತ್ತಿದ್ದನು ಮತ್ತು ತನ್ನ ಪಾಠಗಳನ್ನು ಸರಿಯಾಗಿ ಓದುತ್ತಿರಲಿಲ್ಲ. ಗುರುಗಳು ಎಷ್ಟೇ ಹೇಳಿದರು ಅವನು ತನ್ನ ತಪ್ಪನ್ನು ತಿದ್ದಿಕೊಳ್ಳಲು ಸಿದ್ಧನಿರಲಿಲ್ಲ.

ಒಂದು ದಿನ ಗುರುಗಳು ತಮ್ಮ ವಿದ್ಯಾರ್ಥಿಗಳಿಗೆ ಒಂದು ಪರೀಕ್ಷೆ ಇಟ್ಟರು. ಅವರು ಒಂದು ಪಾತ್ರೆಯಲ್ಲಿ ನೀರನ್ನು ತುಂಬಿಸಿ, 'ಯಾರು ಮೊದಲು ಪಾತ್ರೆಯ ನೀರನ್ನು ಖಾಲಿ ಮಾಡುತ್ತಾರೋ ಅವರಿಗೆ ನಾನು ಬಹುಮಾನವನ್ನು ನೀಡುತ್ತೇನೆ' ಎಂದು ಹೇಳಿದರು.

ಮೊದಲ ವಿದ್ಯಾರ್ಥಿ ತಕ್ಷಣವೇ ಬಟ್ಟಲನ್ನು ಖಾಲಿ ಮಾಡಲು ಪ್ರಯತ್ನಿಸಿದನು. ಅವನು ತನ್ನ ಕೈಗಳಿಂದ ನೀರನ್ನು ಹೊರಹಾಕಲು ಪ್ರಯತ್ನಿಸಿದನು, ಆದರೆ ಅದು ಸಾಧ್ಯವಾಗಲಿಲ್ಲ. ಎರಡನೇ ವಿದ್ಯಾರ್ಥಿ ಸ್ವಲ್ಪ ಹೊತ್ತು ಯೋಚಿಸಿದನು. ನಂತರ ಅವನು ಒಂದು ದೊಡ್ಡ ಬಟ್ಟಲನ್ನು ತೆಗೆದುಕೊಂಡು ಅದರಲ್ಲಿ ನೀರನ್ನು ತುಂಬಿಸಿ ಬಟ್ಟಲಿನಿಂದ ಹೊರಗೆ ಹಾಕಿದನು. ಹೀಗೆ ಅವನು ಬೇಗನೆ ಬಟ್ಟಲನ್ನು ಖಾಲಿ ಮಾಡಿದನು. ಗುರುಗಳು ಎರಡನೇ ವಿದ್ಯಾರ್ಥಿಯನ್ನು ಕರೆದು, 'ನೀನು ತುಂಬಾ ಬುದ್ಧಿವಂತನಾಗಿರುವೆ. ನೀನು ಸಮಸ್ಯೆಯನ್ನು ಬೇರೆ ರೀತಿಯಲ್ಲಿ ಪರಿಹರಿಸುವ ಮಾರ್ಗವನ್ನು ಕಂಡುಕೊಂಡಿದ್ದೀಯ' ಎಂದು ಹೇಳಿದರು.

ಈ ಕಥೆಯ ಮೂಲಕ ವಿದ್ಯಾರ್ಥಿಗಳಾದ ನಾವು ಹೇಗೆ ಇರಬೇಕು ಎಂಬುದನ್ನು ತಿಳಿಯಬಹುದು. ವಿದ್ಯಾರ್ಥಿಗಳು ಯಾವಾಗಲೂ ಶ್ರದ್ಧೆಯಿಂದ ಮತ್ತು ಕಷ್ಟಪಟ್ಟು ಕೆಲಸ ಮಾಡಬೇಕು. ಗುರುಗಳು ಮತ್ತು ತಂದೆ ತಾಯಿ ನಮಗೆ ಒಪ್ಪಿಸಿದ ಕೆಲಸ ಕಾರ್ಯಗಳನ್ನು ನಾವು ಅಚ್ಚುಕಟ್ಟಾಗಿ ಮಾಡಬೇಕಾದರೆ ನಮ್ಮ ತಪ್ಪುಗಳನ್ನು ತಿದ್ದಿಕೊಂಡು ಮುಂದೆ ಸಾಗಬೇಕು.

**– ವೈ. ಸುಭಾಷ್. 9ನೇ ತರಗತಿ**
**ಸರ್ಕಾರಿ ಪೌಢಶಾಲೆ ಬಸರಕೋಡು, ಹಗರಿಬೊಮ್ಮನಹಳ್ಳಿ(ತಾ)**

**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
**ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ**
www.hampitimes.com
epaper.hampitimes.com

ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಮಂಗಳನ ಅಂಗಳದಲ್ಲಿ ಮನುಷ್ಯನ ವಾಸ!

ಒಮ್ಮೊಮ್ಮೆ ಭೂಮಿಯ ಮೇಲಿನ ರೋಗರುಜಿನಗಳು, ಜನರಲ್ಲಿನ ದ್ವೇಷ ಅಸೂಯೆಗಳು ಯಾವಾಗ ಕಡಿಮೆಯಾಗುತ್ತವೆಯೋ ಎನ್ನುವಂತಾಗುತ್ತದೆ. ಕಲುಷಿತ ವಾತಾವರಣದಿಂದ ಬೇಸತ್ತ ಜೀವಕ್ಕೆ ಭೂವಾಸದಿಂದ ಬೇಜಾರಾಗುವುದು ಸಹಜ. ಭೂಗ್ರಹದ ಇಂತಹ ಅನೇಕ ತಾಪತ್ರಯಗಳಿಂದ ರೋಸಿಹೋದ ಮಾನವ ವಾಸಕ್ಕಾಗಿ ಅನ್ಯ ಗ್ರಹ ಹುಡುಕುತ್ತಿರುವುದು ಸಹಜವಾಗಿಯೇ ಇದೆ. ಇದಕ್ಕಾಗಿ ತನ್ನ ಸಮೀಪದ ಮಂಗಳ ಗ್ರಹದತ್ತ ಕಣ್ಣೋಟ ಹಾಕಿರುವುದು ವೇದ್ಯವಾಗುತ್ತದೆ. ಅದಕ್ಕಾಗಿ ಮಂಗಳ ಗ್ರಹವನ್ನು ವಸಾಹತುವನ್ನಾಗಿ ಮಾಡಿಕೊಳ್ಳುವ ಬಗ್ಗೆ ಜನರು ಸಾಕಷ್ಟು ಶ್ರಮಿಸುತ್ತಿದ್ದಾರೆ. ಅದು ಈಗಲೇ ಸಂಭವಿಸಿದರೆ ಮಂಗಳನಲ್ಲಿ ಮೊದಲ ಮಾನವರ ಜೀವನ ಹೇಗಿರುತ್ತೆ? ಮಂಗಳನ ಮೇಲ್ಮೈ ಅಂಗಳದಲ್ಲಿ ಸಾಧ್ಯವಾ? ಮಂಗಳ ಗ್ರಹದ ಮೇಲಿನ ವಿಕಿರಣಗಳಿಂದ ನಾವು ತಪ್ಪಿಸಿಕೊಳ್ಳುವುದು ಹೇಗೆ? ಇತ್ಯಾದಿ ಪ್ರಶ್ನೆಗಳು ಕಾಡುತ್ತಲೇ ಇವೆಯಾ? ನಿಮ್ಮ ಎಲ್ಲ ಪ್ರಶ್ನೆಗಳಿಗೆ ಉತ್ತರವನ್ನು ನೀವೇ ಕಂಡುಕೊಳ್ಳಬೇಕೇ? ಹಾಗಾದರೆ ಇನ್ಯಾಕೆ ತಡ. ಬನ್ನಿ, ಮಂಗಳನ ಅಂಗಳಕ್ಕೆ ಒಂದಿಷ್ಟು ಸುತ್ತಾಡಿ ಬರೋಣ.

ದೂರ,,, ದೂರ,,,, ಭೂಮಿ ಮತ್ತು ಮಂಗಳನ ನಡುವಿನ ದೂರ ಎಷ್ಟು ಗೊತ್ತೇ? ದೂರ ತಿಳಿಯಲು ಅವುಗಳ ಕಕ್ಷಾಪಥ ಹಾಗೂ ಚಲಿಸುವ ವೇಗ ತಿಳಿದಿರಬೇಕು. ಎರಡೂ ಗ್ರಹಗಳು ತಮ್ಮ ಕಕ್ಷೆಯಲ್ಲಿ ಸುತ್ತುತ್ತಾ ಸೂರ್ಯನ ಸುತ್ತ ಸುತ್ತುತ್ತವೆ. ಈ ಎರಡೂ ಗ್ರಹಗಳ ಕಕ್ಷೆ ಮತ್ತು ಚಲಿಸುವ ವೇಗ ಒಂದೇ ಆಗಿಲ್ಲದ ಕಾರಣ ದೂರದಲ್ಲಿ ವ್ಯತ್ಯಾಸಗಳಾಗುತ್ತವೆ. ಭೂಮಿಯಿಂದ ಮಂಗಳನ ಕನಿಷ್ಠ ದೂರ 54.6 ದಶಲಕ್ಷ ಕಿ.ಮೀ. ಗರಿಷ್ಠ ದೂರ 401 ದಶಲಕ್ಷ ಕಿ.ಮೀ ಹಾಗೂ ಸರಾಸರಿ ದೂರ 225 ದಶಲಕ್ಷ ಕಿ.ಮೀ ಆಗಿದೆ.

ಮಂಗಳನ ಬಗ್ಗೆ ಒಂಚೂರು,,, ಮಂಗಳ ಗ್ರಹವು ಸೂರ್ಯನಿಂದ ನಾಲ್ಕನೇ ಗ್ರಹವಾಗಿದ್ದು, ಅಂಗಾರಕ ಹಾಗೂ ಕೆಂಪುಗ್ರಹ ಎಂಬ ಅಭಿನಾಮಗಳಿವೆ. ಭೂಮಿಯ ಶೇಕಡಾ 53 ರಷ್ಟು ಗಾತ್ರ ಹೊಂದಿದೆ. ಸೌರವ್ಯೂಹದಲ್ಲಿ ಬುಧನ ನಂತರ ಎರಡನೇ ಚಿಕ್ಕ ಗ್ರಹವಾಗಿದೆ. ಮಂಗಳ ಗ್ರಹಕ್ಕೆ ಫೋಬೋಸ್ ಮತ್ತು ಡಿಮೋಸ್ ಎಂಬ ಎರಡು ಸ್ವಾಭಾವಿಕ ಉಪಗ್ರಹಗಳಿವೆ. ಮಂಗಳನ ವಾತಾವರಣದಲ್ಲಿ ಕಾರ್ಬನ್ ಡೈ ಆಕ್ಸೈಡ್ ಮುಖ್ಯವಾಗಿದ್ದು, ನೈಟ್ರೋಜನ್, ಆರ್ಗಾನ್, ಅಲ್ಪ ಪ್ರಮಾಣದ ಆಕ್ಸಿಜನ್, ಕಾರ್ಬನ್ ಮೋನಾಕ್ಸೈಡ್, ನೀರಾವಿ, ಧೂಳಿನ ಬಿರುಗಾಳಿ ಇದೆ. ಮಂಗಳ ಗ್ರಹದಲ್ಲಿ ನಮ್ಮ ಸೌರಮಂಡಲದಲ್ಲಿಯೇ ಅತೀ ದೊಡ್ಡ ಪರ್ವತ ಹಾಗೂ ಭಯಂಕರ ಧೂಳಿನ ಬಿರುಗಾಳಿಯ ನೆಲೆಯಾಗಿದೆ. ಮಂಗಳ ಗ್ರಹದ ಮೇಲ್ಮೈಯಲ್ಲಿ ಕಬ್ಬಿಣ ಭರಿತ ಖನಿಜ ಹೆಚ್ಚಿರುವುದರಿಂದ ಕೆಂಪು ಬಣ್ಣ ಪಡೆದಿದೆ. ಈ ಕಾರಣಕ್ಕೆ ಮಂಗಳನ್ನು ಕೆಂಪುಗ್ರಹ ಎಂದೂ ಕರೆಯುತ್ತಾರೆ. ಇಲ್ಲಿನ ಉಷ್ಣತೆ +200 ಸೆಲ್ಸಿಯಸ್(700 ಫ್ಯಾರನ್‌ಹೀಟ್) ಮತ್ತು –1530 ಸೆಲ್ಸಿಯಸ್(–2250 ಫ್ಯಾರನ್‌ಹೀಟ್) ಇದೆ.

ಮಂಗಳನ ಅಂಗಳಕ್ಕೆ ಕಾಲಿಟ್ಟ ಮಾನವ ನಿರ್ಮಿತ ಮಿಶನ್‌ಗಳು : 1965ರಲ್ಲಿ ಮೊದಲ ಬಾರಿಗೆ ಮಂಗಳ ಗ್ರಹಕ್ಕೆ ಬಾಹ್ಯಾಕಾಶ ನೌಕೆ ಕಳಿಸಲಾಯಿತು. ಅದರ ಹೆಸರು ಮಾರಿನರ್–4. 1976ರಲ್ಲಿ ಎರಡು ವೈಕಿಂಗ್ ಅಂತರಿಕ್ಷ ನೌಕೆಗಳು ಮಂಗಳನ ಮೇಲೆ ಇಳಿದು ಅತ್ಯುಪಯುಕ್ತ ಮಾಹಿತಿಯನ್ನು ರವಾನಿಸಿದವು. 1997ರಲ್ಲಿ ಅಮೇರಿಕಾದ ಅಂತರಿಕ್ಷನೌಕೆ "ಪಾತ್ ಫೈಂಡರ್"ನ ಸೋಜರ್ನರ್ ವಾಹನವು ಅಲ್ಲಿನ ಬಂಡೆಗಳ ರಚನೆ ಬಗ್ಗೆ ಮಾಹಿತಿ ಕಳಿಸಿತು. ಇವುಗಳ ಜೊತೆಗೆ ಫೆಬ್ರವರಿ 1969ರಲ್ಲಿ ಮಾರಿನರ್–6, ಮಾರ್ಚ್ 1969ರಲ್ಲಿ ಮಾರಿನರ್–7, ಮೇ 1971ರಲ್ಲಿ ಮಾರ್ಸ್–2 ಮತ್ತು ಮಾರ್ಸ್–3, ಮಾರಿನರ್–9, ಆಗಸ್ಟ್ 1975ರಲ್ಲಿ ವೈಕಿಂಗ್–1, ಸೆಪ್ಟಂಬರ್ 1975ರಲ್ಲಿ ವೈಕಿಂಗ್–2, 1996ರಲ್ಲಿ ಮಾರ್ಸ್ ಗ್ಲೋಬಲ್ ಸರ್ವೆಯರ್, 2003ರಲ್ಲಿ ಸ್ಪಿರ್ಟ್ ಮತ್ತು ಅಪಾರ್ಚುನಿಟಿ, 2004ರಲ್ಲಿ ರೊಸೆಟ್ಟಾ, 2007ರಲ್ಲಿ ಫಿನಿಕ್ಸ್ ಮತ್ತು ಡಾನ್, 2018ರಲ್ಲಿ ಮಾರ್ಕೋ ನೌಕೆಗಳು ಮಂಗಳನ ಅಂಗಳದಲ್ಲಿ ಕಾಲಿಟ್ಟು ವಿವಿಧ ರೀತಿಯ ಮಾಹಿತಿ ಸಂಗ್ರಹಿಸಿಸ ಭೂಮಿಗೆ ರವಾನಿವೆ. ಈ ಎಲ್ಲಾ ಅಂಶಗಳ ಆಧಾರದ ಮೇಲೆ ಮಂಗಳನ ಅಂಗಳದಲ್ಲಿ ಮಾನವ ಜೀವನದ ಕನಸು ಚಿಗುರುತ್ತಿದೆ.



ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ

Scan For Digital Colourful
HAMPI TIMES E-paper

**ಮಂಗಳನಲ್ಲಿ ಜೀವನ:** ಮೂವತ್ತು ಸಾವಿರ ವರ್ಷಗಳ ಹಿಂದೆ ಮಂಗಳನ ಅಂಗಳದಿಂದ ಭೂಮಿಗೆ ಬಿದ್ದ ಉಲ್ಕೆಯೊಂದನ್ನು ವಿಜ್ಞಾನಿಗಳು ಪತ್ತೆ ಹಚ್ಚಿದರು. ಅದರಿಂದ ಮೂರ್‍ನಾಲ್ಕು ಬಿಲಿಯನ್ ವರ್ಷಗಳ ಹಿಂದೆ ಮಂಗಳ ಗ್ರಹದಲ್ಲಿ ಏಕಕೋಶೀಯ ಜೀವಿಗಳು ಇರಬಹುದೆಂದು ಹೇಳಿದರು. ಅಲ್ಲದೇ ಮಂಗಳನಲ್ಲಿ ನೀರು ಇತ್ತು ಎಂಬುದಕ್ಕೆ ಅನೇಕ ಪುರಾವೆಗಳನ್ನು ವಿಜ್ಞಾನಿಗಳು ಕಂಡುಕೊಂಡರು. ಮಂಗಳನ ಧ್ರುವಗಳಲ್ಲಿ ಮಂಜುಗಡ್ಡೆ ಇತ್ತು ಎಂಬುದಕ್ಕೆ ಅನೇಕ ಪುರಾವೆಗಳನ್ನು ಪತ್ತೆ ಹಚ್ಚಿದ್ದಾರೆ. ಮಂಗಳನಲ್ಲಿ ನೀರಿದೆ ಎಂಬುದು ತಿಳಿಯುತ್ತಿದ್ದಂತೆ, ಆ ಗ್ರಹದಲ್ಲೂ ಮಾನವ ಜೀವನ ನಡೆಸ ಬಹುದು ಎಂಬ ಕನಸು ಮೂಡ ತೊಡಗಿತು. 2014ರಲ್ಲಿ ಮಂಗಳನ ಅಂಗಳಕ್ಕೆ ಕಾಲಿಟ್ಟ ನಾಸಾದ ಕ್ಯೂರಿಯಾಸಿಟಿ ರೋವರ್ ಇಲ್ಲಿ ನೀರು ಇರುವುದುನ್ನು ದೃಢಪಡಿಸಿದವು. ಹಾಗಾಗಿ ಮಂಗಳನಲ್ಲಿ ನೆಲೆಸುವ ಮಾನವನ ಕನಸುಗಳು ಮತ್ತಷ್ಟು ಬಣ್ಣ ಪಡೆದವು. ಹಾಗಾದರೆ ನಾಳೆಯೇ ನಾವು ಮಂಗಳನಲ್ಲಿ ವಾಸಿಸಲು ಪ್ರಾರಂಭಿಸಿದರೆ ಏನಾಗುತ್ತೇ? ಎಂಬುದೇ ನಮ್ಮೆಲ್ಲರ ಕಾತುರ ಅಲ್ಲವೇ?.

**ಮಂಗಳಕ್ಕೆ ಪ್ರಯಾಣ:** ಭೂಮಿಯಿಂದ ಮಂಗಳನ ಅಂಗಳ ತಲುಪಲು ಸರಾಸರಿ 225 ಕಿ.ಮೀ ಪ್ರಯಾಣ ಮಾಡಲೇಬೇಕಲ್ಲವೇ? ಭೂಮಿಯಿಂದ ಇದುವರೆಗೂ ಉಡಾವಣೆಯಾದ ಅತೀವೇಗದ ಬಾಹ್ಯಾಕಾಶ ನೌಕೆಯಲ್ಲಿ ಮಂಗಳನತ್ತ ನಮ್ಮ ಪಯಣ ಪ್ರಾರಂಭೀಸಿದರೆ, ನಾವು ಅಲ್ಲಿಗೆ ತಲುಪಲು ಬರೋಬ್ಬರಿ ಒಂಭತ್ತು ತಿಂಗಳು ಬೇಕು. ಈ ಪ್ರಯಾಣದ ಅವಧಿಯಲ್ಲಿ ದಿಗಂತದಿಂದ ಕಾಣುವ ಮಂಗಳ ಶುಷ್ಕ ಹಾಗೂ ನಿರ್ಜೀವ ಗ್ರಹದಂತೆ ಕಾಣುತ್ತದೆ.




ಮಂಗಳ ತಲುಪಿದ ಕೂಡಲೇ ಉಸಿರಾಡಲು ಬೇಕಾದ ಆಮ್ಲಜನಕವನ್ನು ಉತ್ಪಾದಿಸಿ ಕೊಳ್ಳುವುದು ಹೇಗೆ ಎಂಬುದನ್ನು ಕಂಡುಕೊಳ್ಳಬೇಕು. ಏಕೆಂದರೆ ಮಂಗಳನ ವಾತಾವರಣವು ತುಂಬಾ ತೆಳುವಾಗಿದ್ದು, ಶೇ.95ರಷ್ಟು ಇಂಗಾಲದ ಡೈ ಆಕ್ಸೈಡ್ ಹೊಂದಿದೆ. ಬದುಕಲು ಅಗತ್ಯವಿರುವ ಆಮ್ಲಜನಕವನ್ನು ಎಲ್ಲಿಂದ ತರಬೇಕು ಎಂಬುದೇ ಸಮಸ್ಯೆಯಾಗುತ್ತದೆ. ಇದಕ್ಕಾಗಿ ನಾಸಾವು ಒಂದು ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಿದೆ. ಒಔಘಿಖಇ ಎನ್ನುವ ತಂತ್ರಜ್ಞಾನದ ಮೂಲಕ ಘನರೂಪದ ಇಂಗಾಲದ ಡೈ ಆಕ್ಸೈಡನ್ನು ವಿದ್ಯುದ್ವಿಭಜನೆ ಪ್ರಕ್ರಿಯೆಯ ಮೂಲಕ ಅಲ್ಪ ಪ್ರಮಾಣದ ಆಮ್ಲಜನಕವನ್ನು ಉತ್ಪಾದಿಸಲಾಗುತ್ತದೆ. ಆದರೆ ಸದ್ಯಕ್ಕೆ ಇದು ದುಬಾರಿ ಪ್ರಕ್ರಿಯೆಯಾಗಿದೆ. ಅಲ್ಲದೇ ಇದು ಮಾನವರಿಗಾಲೀ ಅಥವಾ ಮಂಗಳನಲ್ಲಿ ವಾಸಿಸುವ ಭೂವಾಸಿಗಳು ಉಸಿರಾಡಲು ಅಗತ್ಯವಾಸ ಆಮ್ಲಜನಕ ನೀಡುವುದಿಲ್ಲ. ಅಲ್ಲದೇ ಮಂಗಳನಲ್ಲಿ ನಿಮಗೆ ಆಹಾರದ ಸಮಸ್ಯೆ ತಲೆದೋರುತ್ತದೆ. ಆಹಾರ ಬೆಳೆಯಲು ಮಂಗಳ ಗ್ರಹದಲ್ಲಿನ ಮಣ್ಣು ಯೋಗ್ಯವಾಗಿಲ್ಲ. ಇದಕ್ಕೂ ಒಂದು ಪರಿಹಾರವಿದೆ. ಮಣ್ಣು ಇಲ್ಲದೇ ಬೆಳೆಗಳನ್ನು ಬೆಳೆಯಲು ನಮಗೆ ಹೈಡ್ರೋಫೋನಿಕ್ಸ್ ಪ್ರಕ್ರಿಯೆ ಸಹಾಯ ಮಾಡುತ್ತದೆ. ಈ ವಿಧಾನದಲ್ಲಿ ಖನಿಜ ಮತ್ತು ಪೌಷ್ಠಿಕ ದ್ರಾವಣದಲ್ಲಿ ನಮಗೆ ಅಗತ್ಯವಿರುವ ಆಹಾರದ ಬೆಳೆಗಳನ್ನು ಬೆಳೆದಯಲು ಅವಕಾಶವಿದೆ. ವಾಸ್ತವವಾಗಿ ಹೈಡ್ರೋಫೋನಿಕ್ಸ್ ವಿಧಾನದಿಂದ ಶೇ.20 ರಷ್ಟು ಆಹಾರವನ್ನು ಮಾತ್ರ ಬೆಳೆಯಬಹುದು. ಉಳಿದ ಆಹಾರ ವಸ್ತುಗಳನ್ನು ಭೂಮಿಯಿಂದಲೇ ಒದಗಿಸಿಕೊಳ್ಳಬೇಕಾಗುತ್ತದೆ. ಭೂಮಿಯಿಂದ ಸಂಸ್ಕರಿಸಿದ ಮಾಂಸವನ್ನು ತೆಗೆದುಕೊಂಡು ಹೋಗಿ ಬಳಸಬಹುದೇ ಹೊರತು ತಾಜಾ ಮಾಂಸವನ್ನು ನಿರೀಕ್ಷಿಸುವಂತಿಲ್ಲ. ಭೂಮಿಯಿಂದ ಉಯ್ಯುವ ಎಲ್ಲಾ ಆಹಾರಗಳನ್ನು ಒಣಗಿಸಿ ಸಂಸ್ಕರಿಸಿ ಕೊಂಡೊಯ್ಯಬೇಕಾಗುತ್ತದೆ.

ಮಂಗಳನಲ್ಲಿ ವಸತಿ ಸಮಸ್ಯೆ ನಮ್ಮನ್ನು ಬಾಧಿಸಬಹುದು. ಏಕೆಂದರೆ ಕಟ್ಟಡ ನಿರ್ಮಿಸಲು ಸಕಲ ಸೌಲಭ್ಯಗಳು ಅಲ್ಲಿಲ್ಲ. ಅಲ್ಲದೇ ಸೂರ್ಯನಿಂದ ಬರುವ ವಿಕಿರಣಗಳನ್ನು ತಪ್ಪಿಸಿಕೊಳ್ಳ ಶ್ರಮಿಸಬೇಕಾಗುತ್ತದೆ. ಅಲ್ಲಿನ ವಾತಾವರಣವು ತುಂಬಾ ತೆಳುವಾಗಿ ರುವುದರಿಂದ ವಿಕಿರಣ ಸೂಸುವಿಕೆ ಪ್ರಮಾಣ ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕಿಂತ 2.5 ಪಟ್ಟು ಹೆಚ್ಚಾಗಿದೆ. ಅದು ಮನುಷ್ಯರಿಗೆ ಸಹಿಸಲಾರದಷ್ಟು ವಿಕಿರಣವಾಗಿದೆ.

ಮಂಗಳನಲ್ಲಿ ನಮ್ಮ ಉಡುಪುಗಳು ಯಾವಾಗಲೂ ಶುಷ್ಕವಾಗಿರುತ್ತವೆ. ಏಕೆಂದರೆ ಮಂಗಳನಲ್ಲಿ ತಾಪಮಾನವು ತುಂಬಾ ಕಡಿಮೆ. ಮಂಗಳನಲ್ಲಿ ಚಳಿ ಜಾಸ್ತಿಯಾಗಿರುತ್ತದೆ. ಚಳಿಗಾಲದಲ್ಲಿ ಅಲ್ಲಿನ ತಾಪಮಾನ –55 ಲಿಅ (–67 ಲಿಈ) ದಿಂದ –153 ಲಿಅ (243 ಲಿಈ) ಇರುತ್ತದೆ. ಮಂಗಳ ಗ್ರಹದ ಒಂದು ದಿನ ಭೂಮಿಯ ಮೇಲಿನ ದಿನಕ್ಕಿಂತ 40 ನಿಮಿಷಗಳು ಹೆಚ್ಚು. ಮಂಗಳ ಗ್ರಹದ ಒಂದು ವರ್ಷ ಭೂಮಿಯ ವರ್ಷಕ್ಕಿಂತ ಎರಡು ಪಟ್ಟು ಹೆಚ್ಚು. ಮಂಗಳದ ಉತ್ತರಾರ್ಧ ಗೋಳದಲ್ಲಿ ವಾಸಿಸಿದರೆ ಏಳೂ ತಿಂಗಳು ವಸಂತಕಾಲ, ಆರು ತಿಂಗಳು ಬೇಸಿಗೆ ಕಾಲ, ಐದು ತುಂಗಳು ಶರತ್ಕಾಲ ಹಾಗೂ ನಾಲ್ಕು ತಿಂಗಳು ಚಳಿಗಾಲ ಅನುಭವಿಸಬೇಕಾಗುತ್ತದೆ.

ಮಂಗಳನಲ್ಲಿ ಆಗಾಗ ಬಲವಾದ ಧೂಳಿನ ಬಿರುಗಾಳಿ ಬೀಸುತ್ತದೆ. ಇದು ನಮಗೆ ಯಾವುದೇ ತೊಂದರೆ ಕೊಡದಿದ್ದರೂ ಅಲ್ಲಿನ ಎಲ್ಲಾ ಎಲೆಕ್ಟ್ರಾನಿಕ್ ವಸ್ತುಗಳ ಮೇಲೆ ಪರಿಣಾಮ ಉಂಟು ಮಾಡುತ್ತದೆ. ಆ ಸಮಯದಲ್ಲಿ ನಾವು ಭೂಮಿಯೊಂದಿಗೆ ಕೂಡಲೇ ಸಂಪರ್ಕ ಸಾಧಿಸಲು ಆಗುವಿದಲ್ಲ. ನಾವು ಅಲ್ಲಿಂದ ಕಳಿಸಿದ ಸಂದೇಶ ಭೂಮಿಯನ್ನು ತಲುಪಲು ಕನಿಷ್ಠ 15 ನಿಮಿಷ ಬೇಕಾಗುತ್ತದೆ. ಜೊತೆಗೆ ಮಂಗಳನ ಗುರುತ್ವವು ಭೂಮಿಯ ಮೂರನೇ ಒಂದು ಭಾಗದಷ್ಟಿದೆ ಎಂಬುದನ್ನು ನಾವು ನೆನಪಿಡಬೇಕು. ಇಂತಹ ಕಡಿಮೆ ಗುತ್ವದಲ್ಲಿ ನಾವು ವಾಸಿಸಬೇಕು? ನಮ್ಮ ನಡಿಗೆ ಹೇಗಿರಬೇಕೆಂಬುದನ್ನು ಸಹ ಅಭ್ಯಾಸ ಮಾಡಬೇಕು.

ಮಂಗಳ ಗ್ರಹವು ತಂಪಾಗಿರುತ್ತದೆ ಎಂಬುದು ತಿಳಿಯಿತು. ಗ್ರಹದಲ್ಲಿ ಕೇವಲ ತಂಪು ಇದ್ದರೆ ಸಾಲದು ಒಂಚೂರು ಬಿಸಿ ವಾತಾವರಣವೂ ಇರಬೇಕಲ್ಲವೇ? ಮಂಗಳ ಗ್ರಹದ ವಾತಾವರಣವನ್ನು ಒಂಚೂರು ಬಿಸಿ ಮಾಡಲು ಬೇರೆ ಗ್ರಹಗಳ ವಾತಾವರಣದಿಂದ ಒಂದಿಷ್ಟು ಅಮೋನಿಯಾ ಸಹಿತ ಮಂಜುಗಡ್ಡೆಯನ್ನು ತರಿಸಿಕೊಳ್ಳಲಾಗುತ್ತದೆ. ಇದರಿಂದ ಮಂಗಳ ಗ್ರಹದ ಉತ್ತರ ಧ್ರುವದಲ್ಲಿನ ಶುಷ್ಕ ಮಂಜುಗಡ್ಡೆಯನ್ನು ಅನಿಲ ರೂಪಕ್ಕೆ ಪರಿವರ್ತಿಸುತ್ತಾರೆ. ಇದು ಮಂಗಳ ಗ್ರಹದಲ್ಲಿ ಒಂದಿಷ್ಟು ಬಿಸಿ ವಾತಾವರಣವನ್ನು ಸೃಷ್ಟಿ ಮಾಡುತ್ತದೆ. ಆದಾಗ್ಯೂ ಈ ಶಾಖದಿಂದ ಕನಿಷ್ಠ ವಾತಾವರಣ ಒತ್ತಡವನ್ನು ಉಂಟುಮಾಡಲು ಸಾಧ್ಯವಾಗುತ್ತದೆ. ಈ ಬಿಸಿ ವಾತಾವರಣ ಮಂಗಳ ಗ್ರಹದಲ್ಲಿದ್ದ ನಾವು ನಮ್ಮ ಬಾಹ್ಯಾಕಾಶ ಉಡುಪನ್ನು ಸ್ವಲ್ಪ ಸಮಯ ಕಳಚಿಡಬಹುದಾದಷ್ಟು ಇರುತ್ತದೆ.

ಮಂಗಳಗ್ರಹದಲ್ಲಿ ಸದ್ಯಕ್ಕೆ ನೀರಿಲ್ಲ. ಆದರೆ ಮಾನವರ ವಾಸಕ್ಕೆ ನೀರು ಬೇಕಲ್ಲವೇ? ವಿಜ್ಞಾನಿಗಳು ಅದಕ್ಕಾಗಿ ಮಂಗಳ ಗ್ರಹದ ಮೇಲ್ಮೈನ ಕೆಳಭಾಗದಲ್ಲಿ ಅಡಕವಾದ ಮಂಜುಗಡ್ಡೆಯಿಂದ ನೀರನ್ನು ಹೊರತೆಗೆಯುತ್ತಾರೆ. ನೀರಾವಿಯು ವಾತಾವರಣ ಸೇರುತ್ತಾ ಸೇರುತ್ತಾ ದಪ್ಪನಾದ ಮೋಡ ರಚನೆಯಾಗುತ್ತದೆ. ಕೊನೆಗೆ ಮಂಗಳ ಗ್ರಹದಲ್ಲಿ ಮಳೆ ಹಾಗೂ ಹಿಮಪಾತ ಉಂಟಾಗುವುದನ್ನು ಕಾಣಬಹುದು. ಈ ಪ್ರಕ್ರಿಯೆ ಸಾವಿರಾರು ವರ್ಷ ಕಳೆದ ನಂತರ ಅಲ್ಲಿ ಮನುಷ್ಯರ ಉಸಿರಾಟಕ್ಕೆ ಅಗತ್ಯವಾದ ಆಮ್ಲಜನಕ ದೊರೆಯಬಹುದು. ಹೀಗೆ ಮಂಗಳ ಗ್ರಹದಲ್ಲಿ ಮರು ತಾಂತ್ರೀಕರಣದಿಂದ ಮಾತ್ರ ಮಾನವ ವಾಸ ಸಾಧ್ಯವಾಗುತ್ತದೆ.

ಈಗ ಹೇಳಿ! ನೀವೂ ಮಂಗಳನ ಅಂಗಳದಲ್ಲಿ ವಾಸಿಸಲು ಇಚ್ಚಿಸುವಿರಾ? ಅಥವಾ ಭೂಮಿಯಲ್ಲಿಯೇ ಇದ್ದು, ಭೂಸಂರಕ್ಷಣೆ ಮಾಡಿ ಮುಂದಿನ ಪೀಳಿಗೆಯ ಸಾಲ ತೀರಿಸುತ್ತೀರಾ?

# ಭಾರತವನ್ನು ಒಂದು ಧರ್ಮದ ರಾಷ್ಟ್ರ ಮಾಡಲು ಸಾಧ್ಯವಿಲ್ಲ

## ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದನೆ। ಸೇತುವೆ ಉದ್ಘಾಟನೆ। ಕೊಡಿಗಿನ ಅಭಿವೃದ್ಧಿಗೆ ಅನುದಾನ

■ **ಹಂಪಿ ಟೈಮ್ಸ್ ಕೊಡಗು**

ಬಹಳ ಜನ ಬಹುತ್ವದ ಭಾರತವನ್ನು ಒಂದು ಧರ್ಮದ ರಾಷ್ಟ ಎನ್ನುತ್ತಾರೆ. ಭಾರತ ಜಾತ್ಯತೀತ, ಪ್ರಜಾಪ್ರಭುತ್ವವಾದಿ ಬಹುತ್ವದ ರಾಷ್ಟ. ಇದನ್ನು ಒಂದು ಧರ್ಮಕ್ಕೆ ಸೇರಿದ ಸಾರ್ವಭೌಮ ರಾಷ್ಟವನ್ನಾಗಿ ಮಾಡಲು ಆಗುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿಪಾದಿಸಿದರು.

ಅವರು ಇಂದು ಜಲಸಂಪನ್ಮೂಲ ಇಲಾಖೆ ಮತ್ತು ಕಾವೇರಿ ನೀರಾವರಿ ನಿಗಮ ನಿಯಮಿತದ ವತಿಯಿಂದ ಆಯೋಜಿಸಲಾಗಿದ್ದ ಭಾಗಮಂಡಲದ ಹತ್ತಿರ ಮಡಿಕೇರಿ ಮತ್ತು ತಲಕಾವೇರಿ ಮತ್ತು ನಾಪೋಕ್ಲು ತಲಕಾವೇರಿ ರಸ್ತೆಗಳ ಛೇದಕದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಮೇಲು ಸೇತುವೆ ಉದ್ಘಾಟಿಸಿ ಮಾತನಾಡಿದರು.

ಎಲ್ಲಾ ಧರ್ಮಗಳು, ಜನರು, ಜಾತಿಗಳೂ ಕೂಡ ಸಮಾನ. ಅದಕ್ಕಾಗಿಯೇ ಸಂವಿಧಾನದಲ್ಲಿ ಸಹಿಷ್ಣುತೆ ಹಾಗೂ ಸಹಬಾಳ್ವೆ ಇರಬೇಕು



ಎಂದಿರುವುದು. ನಮ್ಮ ಧರ್ಮವನ್ನು ಪ್ರೀತಿಸಿ ಗೌರವಿಸಬೇಕು. ಆದರೆ ಇನ್ನೊಂದು ಧರ್ಮವನ್ನು ಅಲ್ಲಗಳೆಯಬಾರದು. ಅದನ್ನೇ ಸಹಿಷ್ಣುತೆ ಎನ್ನುತ್ತಾರೆ. ಸಹಿಸ್ಣುತೆ ಇದ್ದಾಗ ಮಾತ್ರ ನಾವು ಮಾನವರಾಗಿ ಬಾಳಲು ಸಾಧ್ಯವಾಗುತ್ತದೆ. ಕುವೆಂಪು ಅವರು ಹುಟ್ಟುವಾಗ ಎಲ್ಲರೂ ವಿಶ್ವ ಮಾನವರಾಗಿರುತ್ತಾರೆ, ಬೆಳೆಯುತ್ತಾ ಅಲ್ಪಮಾನವರಾಗುತ್ತಾರೆ ಎಂದು ಹೇಳಿದ್ದರು. ನಾವೆಲ್ಲರೂ ವಿಶ್ವಮಾನವರಾಗುವ ಪ್ರಯತ್ನ ಮಾಡಬೇಕು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಗ್ಯಾರಂಟಿ ಯೋಜನೆಗಳಿಂದ ಬಡವರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಶಕ್ತಿ ತುಂಬಲಾಗಿದೆ

ಯಾವ ಪಕ್ಷ ನುಡಿದಂತೆ ನಡೆಯುತ್ತದೆ, ಜನಪರವಾಗಿದೆ ಎನ್ನುವುದನ್ನು ಜನ ಅರ್ಥ ಮಾಡಿಕೊಳ್ಳಬೇಕು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಒಂದು ವರ್ಷ ಎಂಟು ತಿಂಗಳಲ್ಲಿ ಪ್ರಮುಖವಾಗಿ ಭರವಸೆ ನೀಡಿದ್ದ ಐದೂ ಗ್ಯಾರಂಟಿ ಯೋಜನೆಗಳನ್ನು ಒಂದು ವರ್ಷದೊಳಗೆ ಈಡೇರಿಸಿದ್ದೇವೆ. ಶಕ್ತಿ, ಅನ್ನಭಾಗ್ಯ, ಗೃಹಲಕ್ಷ್ಮೀ, ಯುವನಿಧಿ, ಗೃಹಜ್ಯೋತಿ ಯೋಜನೆಗಳನ್ನು ಜಾರಿಗೆ ತಂದು ಸಮಾಜದಲ್ಲಿನ ಎಲ್ಲಾ ಜಾತಿಯ ಬಡವರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಶಕ್ತಿ ತುಂಬುವ ಕೆಲಸವನ್ನು ಮಾಡಿರುವುದು ನಮ್ಮ ಸರ್ಕಾರ ಎಂದರಲ್ಲದೇ ಐದು ಗ್ಯಾರಂಟಿಗಳನ್ನು ಜಾರಿಗೆ ತಂದು ಸಮಾಜದಲ್ಲಿ ಸಮಾನತೆಯನ್ನು ತರುವ ಪ್ರಯತ್ನವನ್ನು ಮಾಡಿದ್ದೇವೆ ಎಂದರು.


ಭ್ರಾತೃತ್ವ ಬೆಳೆಸಿ, ಭಾರತೀಯರಾಗಿ ಬದುಕಬೇಕು

ಕೊಡಗಿನ ಜನ ರಾಜಕೀಯವಾಗಿ ಪ್ರಬುದ್ಧರಾಗಿದ್ದು, ಯಾವ ಸರ್ಕಾರ ನುಡಿದಂತೆ ನಡೆದುಕೊಂಡಿದೆ ಎಂದು ಯೋಚಿಸಬೇಕು. ಭಾರತ ದೇಶ ಬಹುತ್ವದ ದೇಶ. ಎಲ್ಲಾ ಜಾತಿ, ಧರ್ಮ, ಭಾಷೆಗಳಿರುವ ನಾಡಿನಲ್ಲಿ ಮನುಷ್ಯ ಮನುಷ್ಯನನ್ನು ಪ್ರೀತಿಸಬೇಕು. ಯಾವುದೇ ಕಾರಣಕ್ಕೂ ದ್ವೇಷ ಮಾಡಬಾರದು. ದ್ವೇಷ ಮಾಡಿದರೆ ಅದು ಸಂವಿಧಾನಕ್ಕೆ ವಿರುದ್ಧವಾದುದು ಎಂದರು.

**ಕೊಡಿಗಿನ ಅಭಿವೃದ್ಧಿಗೆ ಅನುದಾನ:**

ಭಾಗಮಂಡಲದಲ್ಲಿ ಕಾವೇರಿ, ಕನ್ನಿಕ ಹಾಗೂ ಸುಜ್ಯೋತಿ ನದಿಗಳ ಸಂಗಮವನ್ನು ತ್ರಿವೇಣಿ ಸಂಗಮವಾಗಿದೆ. ಹಿಂದಿನ ನಮ್ಮ ಸರ್ಕಾರದ ಅವಧಿಯಲ್ಲಿ ಕೊಡಗಿನ ಅಭಿವೃದ್ಧಿಗೆ ಅನುದಾನ ನೀಡಿದಂತೆ, ಈ ಬಾರಿಯೂ ಕೊಡಗಿನ ರಸ್ತೆ ಹಾಗೂ ಇತರೆ ಮೂಲಸೌಕರ್ಯಗಳಿಗೆ ಹೆಚ್ಚಿನ ಅನುದಾನವನ್ನು ನೀಡಲಾಗುವುದು ಎಂದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055



SHREE SHANKAR ENTERPRISES LTD, KUDLIGI, VIJAYANAGARA DIST. 90083 66606


## ಕವಿ ಮನಸು

### ಶರಣ

ಘಣಿತೆಯ ಬದುಕಲ್ಲಿ ಹಣತೆಯ ಬೆಳಕಾಗಿ
ಭೂಮಿಗೆ ಇಳಿದು ಬಂದ ಶರಣ
ಒಳಗಿನ ತಿಳಿಯನು ಕಳಕದೆ ಬಾಳಲು
ತಿಳಿಸಿಕೊಟ್ಟ ಶರಣ

ಹಸಿವನ್ನು ತಿಳಿದು ದಾನವ ಮಾಡಿದ
ಕರುಣವಂತ ಶರಣ
ಕತ್ತಲು ಕಳೆದು ಬೆಳಕನ್ನು ತೋರಿದ
ಪ್ರಜ್ಞಾವಂತ ಶರಣ

ಮಂಡಲಗಿಂಡಲ ಎಲ್ಲವೂ ಸುತ್ತಿ
ಕೂಗಿ ಬಂದ ಶರಣ
ಹೊಲದೊಳು ದುಡಿದು ಅನ್ನವ ನೀಡುವ
ರೈತ ನಮ್ಮ ಶರಣ

ಜೇನು ಗೂಡಿನಂತೆ ಕೂಡಿ ಬಾಳಲು
ಕಲಿಸಿಕೊಟ್ಟ ಶರಣ
ಇನಿತೆ ಕಾಲದಲ್ಲಿ ಘನತೆ ಸಾರಿದ ಸಾಧಕ
ನಮ್ಮ ಶರಣ

ಕಣ್ಣಿಗೆ ಕಟ್ಟಿದ ಕನಸಿನಂತೆ ನೀ ಮುನ್ನುಗ್ಗು
ಎಂದಶರಣ
ರಟ್ಟೆಯ ಮುರಿದು ರೊಟ್ಟಿ ತಿನ್ನೋ ಕೂಲಿ
ನಮ್ಮ ಶರಣ

ಕೊಟ್ಟ ಮಾತಿನಂತೆ ಮೆಟ್ಟಿ ನಿಲ್ಲುವ
ಗಟ್ಟಿವಂತಶರಣ
ಪಾಪ ಲೋಕದಲ್ಲಿ ಪುಣ್ಯವ ತಂದವನು
ದೇವಮಾನವ ಶರಣ

– ಜಿ ಯರಿಸ್ವಾಮಿ ಸಂಕ್ಲಾಪುರ

### ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿಯಲ್ಲಿ ಪ್ರಾಧ್ಯಾಪಕ ಅರವಿಂದ ಎಸ್ ವಡ್ಡರ ಹೇಳಿಕೆ

# ಸಿದ್ಧರಾಮೇಶ್ವರರು 12ನೇ ಶತಮಾನದ ಕಾಯಕಯೋಗಿ

■ ಹಂಪಿ ಟೈಮ್ಸ್ ಕೊಪ್ಪಳ

ಶಿವಯೋಗಿ ಸಿದ್ಧರಾಮೇಶ್ವರರು 12ನೇ ಶತಮಾನದ ಪ್ರಸಿದ್ದ ಸಮಾಜ ಸೇವಕರಾಗಿದ್ದರು ಎಂದು ಗಜೇಂದ್ರಗಡ ಎಸ್.ಎಸ್.ಭೂಮರೆಡ್ಡಿ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಅರವಿಂದ ಎಸ್ ವಡ್ಡರ ಹೇಳಿದರು.

ಅವರು ಶುಕ್ರವಾರ ನಗರದ ಸಾಹಿತ್ಯ ಭವನದಲ್ಲಿ ಕೊಪ್ಪಳ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ನಗರಸಭೆ ಸಂಯುಕ್ತಾಶ್ರಯದಲ್ಲಿ ಆಯೋಜಿಸ ಲಾಗಿದ್ದ ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ ಮಾತನಾಡಿದರು. 12ನೇ ಶತಮಾನ ಕ್ಕೂ ಪೂರ್ವದಲ್ಲಿ ಈ ನಾಡಿನಲ್ಲಿ ಮೌಢ್ಯತೆ, ರಾಜ್ಯ ಪ್ರಭುತ್ವದೊಳಗೆ ಗುಲಾಮಗಿರಿಯ ಅಟ್ಟಹಾಸ ನಡೆದಿತ್ತು. ಜಾತಿ ವ್ಯವಸ್ಥೆಯು ತುಂಬಿ ತುಳುಕಿ ಜನರು ಶೋಷಣೆಗೆ ಒಳಗಾಗಿದ್ದರು. ಇಂತಹ ಸಂದರ್ಭದಲ್ಲಿ 12ನೇ ಶತಮಾನದ ಬಸವಾದಿ ಶರಣರ ಹೋರಾಟದಿಂದ ಕಲ್ಯಾಣ ಕ್ರಾಂತಿ ಉಘಮವಾಯಿತು. ಈ ಹೋರಾಟವು ಪ್ರಪಂಚದ ಅತೀದೊಡ್ಡ ಕಲ್ಯಾಣ ಕ್ರಾಂತಿಯಾಗಿದೆ. ಸಮಾಜದ ಸುಧಾರಣೆಯ ಪ್ರತಿಫಲವಾಗಿ ವಚನ ಸಾಹಿತ್ಯ ಹುಟ್ಟಿಕೊಂಡಿತು. ಅನೇಕ ಶರಣರು ತಮ್ಮ ವಚನಗಳ ಮೂಲಕ ಸಮಾಜಕ್ಕೆ ಬೆಳಕನ್ನು ನೀಡಿದ್ದಾರೆ. ಅಂತಹ ಮಹನೀಯರುಗಳಲ್ಲಿ ಬಸವಣ್ಣನವರ ಅನುಭವ ಮಂಟಪದಲ್ಲಿ ವಿಶಿಷ್ಟ ವಚನಕಾರರಾಗಿ ರೂಪುಗೊಂಡ ವರು ಮಹಾನ್ ಶರಣ ಶಿವಯೋಗಿ ಸಿದ್ಧರಾಮೇಶ್ವರರು ಎಂದರು.

ಕ್ರಾಂತಿಕಾರಿ ಧೋರಣೆಗಳಿಂದ ಸಮಾಜ ತಿದ್ದುವ ಕಾರ್ಯ ಮಾಡುವುದರ ಜೊತೆಗೆ ಸಮಾಜ ಮುಖಿ ಕಾಯಕ ಮಾಡುವುದರ ಮೂಲಕ ಕಾಯಕ ಯೋಗಿ ಎನಿಸಿಕೊಂಡವರು ಶಿವಯೋಗಿ ಸಿದ್ಧರಾಮೇಶ್ವರರು. ಅವರ ಬದುಕಿನ ಚಿಂತನೆಗಳನ್ನು ನಾವು ತಿಳಿದು ಕೊಳ್ಳಬೇಕು ಮತ್ತು ಇತರರಿಗೂ ತಿಳಿಸಬೇಕು. ಈ ಹಿನ್ನೆಲೆಯಲ್ಲಿ ಜಯಂತಿ ಕಾರ್ಯಕ್ರಮಗಳನ್ನು ಸರ್ಕಾರದಿಂದ ಆಚರಣೆ ಮಾಡಲಾಗುತ್ತದೆ. ಶರಣರು ಯಾವುದೇ ಒಂದು ಜಾತಿ, ಸಮುದಾಯಕ್ಕೆ ಸಿಮೀತವಾಗಿರದೆ, ಸಮಸ್ತ ಮಾನವ ಕುಲಕ್ಕೆ ಆದರ್ಶವಾಗಿದ್ದಾರೆ. ಮಹನೀಯರ ಜಯಂತಿ ಆಚರಣೆಯ ಜೊತೆಗೆ, ಅವರ ತತ್ವಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಜಯಂತಿ ಆಚರಣೆ ಯು ಜಾಗೃತಿ ಕಾರ್ಯಕ್ರಮಗಳಾಗಬೇಕು. ಅಂದಾಗ ಇಂತಹ ಕಾರ್ಯಕ್ರಮಗಳಿಗೆ ನಿಜವಾಗಿಯೂ ಅರ್ಥ ಬರುತ್ತದೆ ಎಂದು ಹೇಳಿದರು.



ಭೋವಿ ಸಮಾಜದ ಕೊಪ್ಪಳ ಜಿಲ್ಲಾಧ್ಯಕ್ಷರಾದ ಸುಂಕಪ್ಪ ಮಾಲಗಿತ್ತಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯ ನಿರ್ದೇಶಕ ಕೊಟ್ರೇಶ್ ಮರಬನಳ್ಳಿ, ಸಮಾಜದ ಮುಖಂಡರಾದ ಮಾಸ್ತೆಪ್ಪ ಕಟ್ಟಿಮನಿ, ರಾಮಣ್ಣ ಪೂಜಾರ, ರಮೇಶ ಬಸಾಪಟ್ಟಣ, ರಾಮಣ್ಣ ಅಳವಂಡಿ, ಉಚ್ಚಪ್ಪ ಭೋವಿ, ಎಕಪ್ಪ ರ್‍ಯಾವಣಕಿ, ಲಕ್ಷ್ಮಣ ಪೂಜಾರ, ಹೊನ್ನಪ್ಪ ಭೋವಿ, ದುರ್ಗಪ್ಪ ಮ್ಯಾಗೇರಿ, ರಾಮು ಹಾಗೂ ಹಲವು ಮುಖಂಡರು ಸೇರಿದಂತೆ ಇತರೆ ಇಲಾಖೆಗಳ ಅಧಿಕಾರಿ, ಸಿಬ್ಬಂದಿಗಳು ಉಪಸ್ಥಿತರಿದ್ದರು.

**ಸಿದ್ರಾಮೇಶ್ವರರ ಭಾವಚಿತ್ರಕ್ಕೆ ಜಿಲ್ಲಾ ಉಸ್ತುವಾರಿ ಸಚಿವರಿಂದ ಪುಷ್ಪಾರ್ಚನೆ:** ಕೊಪ್ಪಳ ಜಿಲ್ಲಾ ಪ್ರವಾಸದಲ್ಲಿದ್ದ ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್ ತಂಗಡಗಿ ಅವರು ಶಿವಯೋಗಿ ಸಿದ್ರಾಮೇಶ್ವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವು ಮೂಲಕ ಗೌರವ ಸಮರ್ಪಿಸಿದರು.

ಈ ಸಂದರ್ಭದಲ್ಲಿ ಕೊಪ್ಪಳ ಸಂಸದರಾದ ಕೆ. ರಾಜಶೇಖರ ಬಸವರಾಜ ಹಿಟ್ನಾಳ, ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ್, ಮಾಜಿ ಸಂಸದರಾದ ಕರಡಿ ಸಂಗಣ್ಣ ಹಾಗೂ ಇತರೆ ಜನಪ್ರತಿನಿಧಿಗಳು, ಅಧಿಕಾರಿಗಳು ಸೇರಿದಂತೆ ಸಮಾಜದ ಮುಖಂಡರು ಉಪಸ್ಥಿತರಿದ್ದರು.

**ಅದ್ದೂರಿ ಮೇರವಣಿಗೆ:** ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ ನಿಮಿತ್ತ ಸಿದ್ರಾಮೇಶ್ವರ ಭಾವಚಿತ್ರದ ಮೆರವಣಿಗೆಗೆ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ್ ಹಾಗೂ ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್ ಅವರು ಚಾಲನೆ ನೀಡಿದರು. ಇದೇ ವೇಳೆ ಕೊಪ್ಪಳ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ತಹಶೀಲ್ದಾರ ವಿಠ್ಠಲ್ ಚೌಗಲಾ ಸೇರಿ ಮತ್ತಿತರರಿದ್ದರು.

ಮೆರವಣಿಗೆಯು ಶ್ರೀ ಗವಿಸಿದ್ದೇಶ್ವರ ಮಠದಿಂದ ಪ್ರಾರಂಭಗೊಂಡು, ಗಡಿಯಾರ ಕಂಬ, ಜವಾಹರ ರಸ್ತೆ ಮೂಲಕ ಅಶೋಕ ಸರ್ಕಲ್ ಬಳಿಯ ಸಾಹಿತ್ಯ ಭವನದವರೆಗೆ ಅದ್ದೂರಿಯಾಗಿ ನಡೆಯಿತು. ಈ ಮೆರವಣಿಗೆಯಲ್ಲಿ ಮಹಿಳೆಯರು ತಲೆಯ ಮೇಲೆ ಕುಂಭ ಹೊತ್ತು ಸರತಿ ಸಾಲಿನಲ್ಲಿ ನಡೆಯುತ್ತಿರುವುದು ವಿಶೇಷವಾಗಿತ್ತು. ಭೋವಿ ಸಮಾಜದವರು ಸೇರಿದಂತೆ ಹಲವಾರು ಜನರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.



## ತುಂಗಭದ್ರಾ ನೀರಿನ ಮಟ್ಟ

ಶುಕ್ರವಾರ : 31–01–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1617.06 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 10137 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 53.468 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1588.39 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 442 ಕ್ಯುಸೆಕ್ |
| ಸಾಮರ್ಥ್ಯ | 9.740 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಕ್ರೋಧಿ

01–02–2025 – ಶನಿವಾರ

| | |
|---|---|
| ತಿಥಿ | ತೃತೀಯ |
| ಪಕ್ಷ | ಶುಕ್ಲ |
| ನಕ್ಷತ್ರ | ಪೂರ್ವಭಾದ್ರಪದ |
| ಯೋಗ | ಪರಿಘ |
| ಕರಣ | ಗರಜ |
| ಸೂರ್ಯೋದಯ | 07:08:05 |
| ಸೂರ್ಯಾಸ್ತ | 18:13:14 |
| ರಾಹು ಕಾಲ | 09:54–11:18 |
| ಯಮಘಂಡ ಕಾಲ | 14:04–15:27 |
| ಗುಳಿಕ ಕಾಲ | 07:08–08:31 |


ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038


# ಬಹದ್ದೂರುಬಂಡಿ ಏತನೀರಾವರಿ ರೈತರಿಗೆ ಅನುಕೂಲ

### ಸಚಿವ ಶಿವರಾಜ ಎಸ್. ತಂಗಡಗಿ ಹೇಳಿಕೆ

■ ಹಂಪಿ ಟೈಮ್ಸ್ ಕೊಪ್ಪಳ

ಬಹದ್ದೂರುಬಂಡಿ ಏತನೀರಾವರಿಯಿಂದ ನಮ್ಮ ಭಾಗದ ರೈತರಿಗೆ ಅನುಕೂಲವಾಗಲಿದೆ. ಈ ಭಾಗದಲ್ಲಿ ಮಣ್ಣು ಫಲವತ್ತಾಗಿರುವುದರಿಂದ ಇಂಥಹ ಮಣ್ಣಿಗೆ ನೀರು ಬಂದು ಬಿಟ್ಟರೆ ರೈತನ ಬದುಕು ಬಂಗಾರವಾಗುತ್ತದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್ ತಂಗಡಗಿ ಹೇಳಿದರು.

ಅವರು ಶುಕ್ರವಾರ ಮುಂಡರಗಿ ಜಾಕವೆಲ್ ಪಾಯಿಂಟ್ ಹತ್ತಿರ ಬಹದ್ದೂರ್ ಬಂಡಿ ನವಲಕಲ್ ಏತ ನೀರಾವರಿ ಯೋಜನೆ ಪಂಪ್‌ಹೌಸ್‌ನ ಪ್ರಾಯೋಗಿಕ ಚಾಲನಾ ಕಾರ್ಯಕ್ರಮ ನೆರವೇರಿಸಿ ಮಾತನಾಡಿದರು.

2018 ರಲ್ಲಿ ಬಹದ್ದೂರ್ ಬಂಡಿ ಏತ ನೀರಾವರಿ ಯೋಜನೆಗೆ ಅಡಿಗಲ್ಲು ಹಾಕಲಾಗಿತ್ತು. ಬಹುದಿನಗಳ ಕನಸು ಈಗ ನನಸಾಗಿದೆ. ನಮ್ಮ ಶಾಸಕರು ನಾವು ಮೊನ್ನೆ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ 236 ಕೋಟಿ ಹಣ ಈ ಯೋಜನೆ ಫಿಡರ್ ಚನಾಲ್‌ಗಾಗಿ ಮಂಜೂರ ಮಾಡಿಸಿದ್ದೆವೆ. ನಮ್ಮ ರೈತರು ನೆಮ್ಮದಿಯಿಂದ ಇರಬೇಕು. ಅಧಿಕಾರ ಬರುತ್ತೆ ಹೋಗುತ್ತದೆ ಅಧಿಕಾರ ಇದ್ದಾಗ ಒಳ್ಳೆಯ ಕೆಲಸ ಮಾಡಬೇಕು. ನಾನು ಮೊದಲು ಕೆರೆ ತುಂಬಿಸುವ ಯೋಜನೆ ಕನಕಗಿರಿಯಿಂದಲೆ ಆರಂಭಿಸಿದ್ದೆ. ಬಳಿಕ ಎಲ್ಲಾ ಕಡೆ ಈ ಯೋಜನೆ ಆರಂಭಿಸಲಾಯಿತು. ಇದರಿಂದ ರೈತರಿಗೆ ಬಹಳ ಅನುಕೂಲವಾಗಿದೆ ಎಂದು ಹೇಳಿದರು.

ಬರುವ ದಿನಗಳಲ್ಲಿ ನನ್ನ ಕ್ಷೇತ್ರದಲ್ಲಿ ತೋಟಗಾರಿಕೆ ಪಾರ್ಕ್ ಮಾಡುತ್ತೆನೆ. ಇದು ಮಾತ್ರವಲ್ಲದೆ ಸಿಂಗಟಾಲೂರು ಯೋಜನೆ ಮುಗಿಸಿ ರೈತರಿಗೆ ನೀರು ಕೊಡುವ ಕೆಲಸ ಮಾಡುತ್ತೆವೆ. ಗಿಣಿಗೇರಾ ಕೆರೆ ತುಂಬಿಸುವ ಯೋಜನೆ ವಿಚಾರ ಪ್ರಸ್ತಾಪ ಮಾಡಲಾಗಿದೆ. ಬಹದ್ದೂರ್ ಬಂಡಿ ಏತ ನೀರಾವರಿ ಯೋಜನೆಯಿಂದ 17 ಗ್ರಾಮಗಳ ವ್ಯಾಪ್ತಿಯ 12,988 ಎಕರೆ ಪ್ರದೇಶದ ಜಮೀನಿಗೆ ನೀರಾವರಿ ಸೌಲಭ್ಯ ದೊರೆಯಲಿದೆ ಎಂದು ಹೇಳಿದರು.

ಕೊಪ್ಪಳ ವಿಧಾನಸಭಾ ಕ್ಷೇತ್ರದ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಮಾತನಾಡಿ ಬಹದ್ದೂರ್ ಬಂಡಿ ಏತ ನೀರಾವರಿ ಯೋಜನೆ ಈ ಭಾಗದ ರೈತರ ಬಹುದಿನಗಳ ಹೋರಾಟದ ಫಲವಾಗಿದೆ. ನೀರಾವರಿಯಿಂದ ರೈತರ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಲಿದೆ. ಸಿಂಗಟಾಲೂರು ಏತ ನೀರಾವರಿಯಿಂದ 90 ಸಾವಿರ ಎಕರೆ ಜಮೀನು ನೀರಾವರಿಯಾಗಲಿದೆ. ಬಹದ್ದೂರುಬಂಡಿ–ನವಲಕಲ ಏತ ನೀರಾವರಿ ಯೋಜನೆಗೆ 188 ಕೋಟಿ ರೂ. ಹಾಗೂ ಅಳವಂಡಿ–ಬೆಟಗೇರಿ ಏತ ನೀರಾವರಿ ಯೋಜನೆಗೆ 88 ಕೋಟಿ ರೂ ಅನುದಾನ ನೀಡುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಂದು ಒಂದೇ ಸಲಕ್ಕೆ ಈ ಯೋಜನೆಗಳಿಗೆ ಚಾಲನೆ ನೀಡಿದ್ದರು ಎಂದು ಹೇಳಿದರು.

ಬಹದ್ದೂರ್ ಬಂಡಿ ಏತ ನೀರಾವರಿ ಕೆನಾಲ ಕೆಲಸಕ್ಕೆ ರೂ. 256 ಕೋಟಿ ಹಣ ಮಂಜೂರು ಮಾಡಲಾಗಿದೆ. ರೈತರ ಪರವಾಗಿ ಕೆಲಸ ಮಾಡಿದಾಗ ಹೊಲಗಳಿಗೆ ನೀರಾವರಿ ಆಗುತ್ತವೆ. ನೀರಾವರಿ. ಆರೋಗ್ಯ. ಶಿಕ್ಷಣ ಕ್ಷೇತ್ರದ ಅಭಿವೃದ್ಧಿ ಜೊತೆಗೆ ದೂರದೃಷ್ಟಿ ಕೋನ ಇಟ್ಟುಕೊಂಡು ಕೆಲಸ ಮಾಡುತ್ತಿದ್ದೆವೆ. ಇದೇ ತಿಂಗಳಲ್ಲಿ 450 ಬೆಡ್ಡಿನ ಆಸ್ಪತ್ರೆ ಲೋಕಾರ್ಪಣೆ ಮಾಡುವ ಕೆಲಸ ಮಾಡುತ್ತಿದ್ದೆವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್. ಮಾಜಿ ಸಂಸದರಾದ ಸಂಗಣ್ಣ ಕರಡಿ. ಮಾಜಿ. ಶಾಸಕರಾದ ಕೆ.ಬಸವರಾಜ ಹಿಟ್ನಾಳ, ಜಿಲ್ಲಾ ಪಂಚಾಯತ ಮಾಜಿ ಸದಸ್ಯರಾದ ಗೂಳಪ್ಪ ಹಲಗೇರಿ ಮಾತನಾಡಿದರು.

ಈ ಸಂದರ್ಭದಲ್ಲಿ ಕೊಪ್ಪಳ ಸಂಸದರಾದ ಕೆ.ರಾಜಶೇಖರ ಬಸವರಾಜ ಹಿಟ್ನಾಳ. ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀನಿವಾಸ ಗುಪ್ತಾ. ನೀರಾವರಿ ಕೇಂದ್ರ ವಲಯ ಕೆ.ಎನ್.ಎನ್.ಎಲ್ ಮುನಿರಾಬಾದ ಮುಖ್ಯ ಇಂಜಿನಿಯರ್ ಹನುಮಂತಪ್ಪ ದಾಸರ. ಅಧೀಕ್ಷಕ ಇಂಜಿನಿಯರ್ ಬಸವರಾಜ. ಕಾರ್ಯಪಾಲಕ ಇಂಜಿನಿಯರ್ ಗಿರೀಶ್. ಕೃಷ್ಣ ರೆಡ್ಡಿ. ಗಾಳಪ್ಪ ಪೂಜಾರಿ. ಯಂಕಪ್ಪ ಸೇರಿದಂತೆ ರೈತರು ಹಾಗೂ ಇತರೆ ಹಲವಾರು ಜನರು ಉಪಸ್ಥಿತರಿದ್ದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ

HAMPI TIMES MARGADARSHI

ಈಗಿಂದಲೇ ಪುನರ್‌ಮನನ ಮಾಡಿ

ಪರೀಕ್ಷೆಗೆ ನಾವು ಸಿದ್ಧ 48 ದಿನ

ಮನಸ್ಸು ಮಾಡು-ಕರ್ತವ್ಯ ನಿಷ್ಟನಾಗು-ಕಾದು ನೋಡು

https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಹಿಂದಿ

**10 ನೇ ತರಗತಿ ಮಾದರಿ ಪ್ರಶ್ನೆ- ಪತ್ರಿಕೆ ಹಿಂದಿ**

अंक : 80 हिन्दी समय : 3 घंटे

**I निम्नलिखित प्रश्नों के लिए चार - चार विकल्प दिए गए हैं, उनमें से सर्वाधिक उचित विकल्प चुनकर लिखिए:8 x 1 = 8**

1) ‘ रात ’ शब्द का विलोम शब्द है -
A) सुबह B) प्रात:काल C) शाम D) दिन

2) निम्नलिखित में से ‘बहु वचन ’ शब्द है -
A) बच्चा B) गली C) प्रतियाँ D) केला

3) ‘ बालक ’ शब्द का अन्य लिंग है _
A) बालिका B) बालकी C) बालकों D) बहन

4) ‘ जागना’ शब्द का प्रथम प्रेरणार्थक शब्द है -
A) जागाना B) जाग C) जागवाना D) जगाना

5) ‘ परोपकार ’ शब्द में संधि है -
A) गुण B) दीर्घ C) यण् D) व्यंजन

6 ) ‘ राजमहल ’ शब्द में समास है -
A) अव्ययीभाव B) द्विगु C) तत्पुरुष D) द्वंद

7) तुम्हारा घर कहाँ है - इस वाक्य के लिए उपयुक्त विराम चिन्ह होगा -
A) अल्प विराम B) प्रश्नवाचक
C) अर्ध विराम D) पूर्ण विराम

8) मेरे पास बहुत ------- पशु - पक्षी है ।
A) ने B) से C) में D) को

**II निम्नलिखित प्रथम दो शब्दों के सूचित संबंधों के अनुरूप तीसरे शब्द का संबंधित शब्द लिखिए : 4 x 1 = 4**

9) बसंत : अहीर टीला:: पंडित राजकिशोर :----
10)गिल्लू :रेखाचित्र :: ईमानदारों के सम्मेलन में : --
11) जैनुलाबदीन :आशियम्मा :: जलालुद्दीन : ----
12) कृष्ण को चिढानेवाले : बलराम :: चुटकी देकर हँसनेवाले : ---------

**III निम्नलिखित प्रश्नों के उत्तर एक -एक वाक्य में लिखिए : 4 x 1 = 4**

13) प्रेमचंद जी चौक में क्यों गये थे ?
14)लेखक पहनने के कपडे कहाँ दबाकर सोये?
15) तुलसीदास जी के अनुसार विपत्ति के साथी कौन है ?
16) आज की दुनिया कैसी है ?

**IV निम्नलिखित प्रश्नों के उत्तर दो -तीन वाक्यों में लिखिए : 8 x 2 = 16**

17) कश्मीरी सेब पाठ में प्रेमचंद जी ने गाजर के बारे में क्या बताया है ?
18) जलालुद्दीन ने अब्दुल कलाम को किसके बारे में बताते थे ?
19)‘ बालशक्ति ’ की टोली ने गाँव को "आदर्श गाँव " कैसे बनाया ?
20) यशोदा कृष्ण के क्रोध को कैसे शांत करती है ?
21) मछली ने दोस्तों के प्रश्न का क्या जवाब दिया ?
22) दिनकर जी के अनुसार मानव का सही परिचय क्या है ?
23) शनि एक अत्यंत ठंडा ग्रह है । कैसे ? **अथवा** शनि का निर्माण किस प्रकार हुआ ?
24) सत्य क्या है ? उसका रूप कैसे होता है ? **अथवा** पंद्रह दिवसीय कार्यशिबिर में किन – किन कार्यक्रमों का आयोजन किया गया था ?

**V निम्नलिखित प्रश्नों के उत्तर तीन-चार वाक्यों में लिखिए : 9 x 3 =27**

25) भारत माँ के प्रकृति- सौंदर्य का वर्णन कीजिए ।
26) गिल्लू के कार्य-कलाप के बारे में लिखिए ।
27) ‘ सोशल नेटवर्किंग ’ एक क्रांतिकारी खोज है । कैसे ?
28) समय की पहचान कविता के अंतिम चार पंक्तियों में कवि क्या कहना चाहता है ?
29)दक्षिणी शिखर पर चढते समय बिछेंद्री केअनुभव के बारे में लिखिए ।
30) धीरज सक्सेना ने रोबोट रखने क निर्णय क्यों लिया ?
31) बसंत ईमानदार लडका है । कैसे ?
32) दोहे का भावार्थ अपने शब्दों में लिखिए :
दया धर्म का मूल है, पाप मूल आभिमान ।
तुलसी दया न छाँडिये, जब लग घट में प्राण ॥

**33) गध्यांश का अनुवाद कन्नड या अंग्रेजी में कीजिए :**

गिलहरियों के जीवन की अवधि दो वर्ष से अधिक नही होती | अत: गिल्लू की जीवनी - यात्रा का अंत आ ही गया | दिन भर उसने न कुछ खाया , न वह बाहर गया |

( ಮುಂದುವರೆಯುವುದು --------- )

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಹೆಚ್.ತುಕಾರಾಮ್ ನಾಯ್ಕ, ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

ಮೈಕ್ರೋ ನ್ಯೂಸ್

## ಫೆ.1, 2 ರಂದು ಮಹಿಳಾ ಸ್ವಸಹಾಯ ಸಂಘದಿಂದ ವಸ್ತುಗಳ ಮಾರಾಟ ಮೇಳ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾ ಕೌಶಲಾಭಿವೃದ್ಧಿ ಇಲಾಖೆ, ನಗರಸಭೆ ಕಾರ್ಯಾಲಯ ಹಾಗೂ ಜನನಿ ವಿವಿದೋದ್ದೇಶ ಸೇವಾ ಸಂಸ್ಥೆ ವತಿಯಿಂದ ಡೇನಲ್ಮ್ ಯೋಜನೆಯಡಿ ಮಹಿಳಾ ಸ್ವಸಹಾಯ ಸಂಘದಿಂದ ತಯಾರಿಸಿದ ವಸ್ತುಗಳ ಮಾರಾಟ ಮೇಳವನ್ನು ಆಯೋಜಿಸಲಾಗಿದೆ ಎಂದು ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

ಹೊಸಪೇಟೆ ವ್ಯಾಪ್ತಿಯಲ್ಲಿನ ಡೇ-ನಲ್ಮ್ ಯೋಜನೆಯಡಿ ಮಹಿಳಾ ಸ್ವಸಹಾಯ ಸಂಘಗಳನ್ನು ರಚಿಸಲಾಗಿದೆ. ಸ್ವಸಹಾಯ ಸಂಘದಲ್ಲಿರುವ ಮಹಿಳೆಯರು ಸ್ವಾವಲಂಬಿಗಳಾಗಿ ಆರ್ಥಿಕ ಹಾಗೂ ಸಾಮಾಜಿಕವಾಗಿ ಸಬಲರಾಗುವ ಉದ್ದೇಶದಿಂದ ಹಲವಾರು ಚಟುವಟಿಕೆಗಳ ಉತ್ಪಾದನೆಯಲ್ಲಿ ತೊಡಗಿರುತ್ತಾರೆ. ಈ ಮಹಿಳೆಯರು ಉತ್ಪಾಸಿದ ವಸ್ತುಗಳ ಮಾರಾಟ ಮಾಡಲು ಮಾರುಕಟ್ಟೆ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಸ್ಥಳೀಯವಾಗಿ ಜನನಿ ವಿವಿದೋದ್ದೇಶ ಸೇವಾ ಸಂಸ್ಥೆಯೊಂದಿಗೆ ಫ್ರೀಡಂ ಪಾರ್ಕ್, ರೈಲ್ವೇ ಸ್ಟೇಷನ್ ಹತ್ತಿರ, ಫೆ.1 ಮತ್ತು 2 ರಂದು ಮಾರಾಟ ಮೇಳ ಕಾರ್ಯಕ್ರಮ ಆಯೋಜಿಸಿದೆ. ಸಾರ್ವಜನಿಕರು ಮೇಳದಲ್ಲಿ ಭಾಗವಹಿಸಿ ವಸ್ತುಗಳನ್ನು ಖರೀದಿಸಿ, ಮಹಿಳೆಯರಿಗೆ ಪ್ರೋತ್ಸಾಹ ನೀಡಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ಸ್ಪರ್ಶ ಕುಷ್ಠರೋಗ ಜಾಗೃತಿ ಅಭಿಯಾನ-2025 । ಪ್ರತಿಜ್ಞಾ ವಿಧಿ ಭೋದಿಸಿದ ಜಿಪಂ ಸಿಇಒ ಎನ್.ಎಂ. ಅಕ್ರಮ್ ಅಲಿ ಷಾ

# ಬಾಧಿತ ಪ್ರದೇಶಗಳಲ್ಲಿ ಜಾಗೃತಿ ಹೆಚ್ಚಲಿ



**ಹಂಪಿ ಟೈಮ್ಸ್ ಹೊಸಪೇಟೆ**

ಕುಷ್ಠರೋಗ ಭಾಧಿತ ಪ್ರದೇಶದಲ್ಲಿ ಹೆಚ್ಚಿನ ಜನ ಜಾಗೃತಿಮೂಡಿಸಲುಆರೋಗ್ಯಇಲಾಖೆಯೊಂದಿಗೆ ವಿವಿಧ ಇಲಾಖೆಗಳು ಒಟ್ಟಾಗಿ ಶ್ರಮಿಸೋಣ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ನೊಂಗ್ಜಾಯ್ ಮೊಹಮ್ಮದ್ ಅಕ್ರಮ ಅಲಿ ಷಾ ಹೇಳಿದರು.

ನಗರದ ಜಿಲ್ಲಾ ಪಂಚಾಯತ್ ಸಿಇಒ ಕಚೇರಿಯಲ್ಲಿ ಸ್ಪರ್ಶ ಕುಷ್ಠರೋಗ ಜಾಗೃತಿ ಅಭಿಯಾನ ನಿಮಿತ್ತ ಪೋಸ್ಟರ್ ಬಿಡುಗಡೆಗೊಳಿಸಿ ಅವರು ಗುರುವಾರ ಮಾತನಾಡಿದರು. ಕುಷ್ಠರೋಗ ಪ್ರಕರಣಗಳು ಪತ್ತೆಯಾದ ಪ್ರದೇಶ, ವಾರ್ಡುಗಳಿಗೆ ಹೆಚ್ಚಿನ ಆದ್ಯತೆ ನೀಡಿ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ತಾಲೂಕು, ಗ್ರಾಮ ಪಂಚಾಯತ್‌ಗಳಲ್ಲಿ ಸ್ಪರ್ಶ್ ಕುಷ್ಠರೋಗ ಜಾಗೃತಿ ಅಭಿಯಾನ-2025ರ ಕುರಿತು ಕಾರ್ಯಕ್ರಮಗಳನ್ನು ಗ್ರಾಮ ಪಂಚಾಯತಿ ವಾರು ಆಯಾ ಗ್ರಾಮ ಪಂಚಾಯತಿ ಅಧ್ಯಕ್ಷರು ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿಯ ಸಹಯೋಗದಲ್ಲಿ ವಿಶೇಷ ಗ್ರಾಮಸಭೆ, ಆಯಾ ಗ್ರಾಮಗಳಲ್ಲಿ ಶಾಲಾ, ಕಾಲೇಜು ಮಕ್ಕಳಿಂದ ಜಾಥಾ ಕಾರ್ಯಕ್ರಮ, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಮೂಲಕ ನಗರ ಮತ್ತು ಗ್ರಾಮೀಣ ಭಾಗದಲ್ಲಿ ಜಾಗೃತಿ ಅಭಿಯಾನವನ್ನು ಹಮ್ಮಿಕೊಳ್ಳಬೇಕು. ಜಿಲ್ಲೆಯ ಆಶ್ರಮ ಶಾಲೆ, ವಸತಿ ನಿಲಯಗಳಲ್ಲಿ, ಶಾಲಾ, ಕಾಲೇಜುಗಳಲ್ಲಿ ಪ್ರಾರ್ಥನೆ ವೇಳೆಯಲ್ಲಿ ಕುಷ್ಠ ರೋಗದ ಬಗ್ಗೆ ಅರಿವು ಮೂಡಿಸಬೇಕು. ಸಾರ್ವ ಜನಿಕರಿಗೆ ಕುಷ್ಠರೋಗದ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸೋಣ ಮತ್ತು ಕುಷ್ಠರೋಗದಿಂದ ಯಾರೂ ಬಾಧಿತರಾಗದಂತೆ ನೋಡಿಕೊಳ್ಳೋಣ. ಕುಷ್ಠರೋಗ ಸಂಪೂರ್ಣ ವಾಸಿಯಾಗಬಲ್ಲ ರೋಗವಾಗಿದ್ದು, ವೈಜ್ಞಾನಿಕವಾಗಿ ನಿರಂತರ ಚಿಕಿತ್ಸೆಯ ಅಗತ್ಯವಿದೆ ಎಂಬುದನ್ನು ರೋಗಿಗೆ ಹಾಗೂ ರೋಗಿಯ ಕುಟುಂಬಕ್ಕೆ ಮನದಟ್ಟು ಮಾಡಬೇಕು. ರೋಗದ ಲಕ್ಷಣಗಳು ಕಂಡುಬರುವವರಿಗೆ ಸಮೀಪದ ಸರ್ಕಾರಿ ಆಸ್ಪತ್ರೆಗಳಲ್ಲಿ ಪರೀಕ್ಷೆ ಮತ್ತು ಚಿಕಿತ್ಸೆ ಪಡೆದುಕೊಳ್ಳುವಂತೆ ಅರಿವು ಮೂಡಿಸಬೇಕಿದೆ ಎಂದರು.

ಬಳಿಕ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರತಿಜ್ಞಾ ವಿಧಿ ಭೋದಿಸಿದರು. ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ಕೆ. ರಾಧಿಕಾ ಪ್ರಾಸ್ತಾವಿಕವಾಗಿ ಮಾತನಾಡಿ, ಪ್ರಸಕ್ತ ವರ್ಷದಲ್ಲಿ 103 ಹೊಸ ಕುಷ್ಠರೋಗಿಗಳನ್ನು ಪತ್ತೆಹಚ್ಚಿದ್ದು, 76 ಕುಷ್ಠರೋಗ ಫಲಾನುಭವಿಗಳಿಗೆ ಕುಷ್ಠರೋಗದಿಂದಗುಣಮುಖಗೊಳಿಸಲಾಗಿದೆ.111 ಕುಷ್ಠರೋಗಿಗಳು ಪ್ರಸ್ತುತ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಜಿಲ್ಲೆಯ ಎಲ್ಲಾ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು ಭಾಗವಹಿಸಿದ್ದರು.

# ರಸ್ತೆ ಸಂಚಾರ ನಿಯಮ ಪಾಲಿಸಿ, ಜೀವ ಉಳಿಸಿ

**ಮೊದಲ ಪುಟದಿಂದ**

ಮಂಜಮ್ಮ ಜೋಗತಿ ಮಾತನಾಡಿ, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ರಸ್ತೆಯಲ್ಲಿ ಸಂಚರಿಸುವ ವೇಳೆ ಮೊಬೈಲ್ ಬಳಕೆಯಿಂದಲೇ ಅನೇಕ ಅಪಘಾತ ಪ್ರಕರಣಗಳು ಕಂಡು ಬಂದಿವೆ. ಯುವಕರು ಕಡ್ಡಾಯವಾಗಿ ಸಂಚಾರಿ ನಿಯಮಗಳನ್ನು ಪಾಲನೆ ಮಾಡಬೇಕಿದೆ. ಮುಂದಿನ ಪೀಳಿಗೆಯವರು ಸಂಚಾರಿ ನಿಯಮ ಪಾಲನೆಯನ್ನು ಕರ್ತವ್ಯವೇ ಎಂದು ಪಾಲಿಸುವ ಅನಿವಾರ್ಯತೆ ಇದೆ ಎಂದರು.

ಅಪರ ಸಾರಿಗೆ ಅಯುಕ್ತ ಕೆ.ಟಿ.ಹಾಲಸ್ವಾಮಿ ಮಾತನಾಡಿ, ರಸ್ತೆ ಸಂಚಾರಿ ನಿಯಮ ಪಾಲನೆ ಬಗ್ಗೆ ಎಲ್ಲರಿಗೂ ಅರಿವು ಮೂಡಿಸಲು ಇತರೆ ಸಂಘ, ಸಂಸ್ಥೆಗಳು ಕೈಜೋಡಿಸಬೇಕಿದೆ. ಸಾರ್ವಜನಿಕರ ಸಹಕಾರ ಅಗತ್ಯವಾಗಿದೆ. ಪ್ರತಿಯೊಬ್ಬರ ಜೀವಕ್ಕೂ, ಮೌಲ್ಯವಿದೆ ಎಂದರು.

ಇದಕ್ಕೂ ಮುನ್ನಾ ನಗರದ ಗಾಂಧಿ ಚೌಕ್‌ನಿಂದ ಜಿಲ್ಲಾ ಕ್ರೀಡಾಂಗಣದವರೆಗೆ ಕಾಲ್ನಡಿಗೆ ಜಾಥಾ ನಡೆಸಲಾಯಿತು. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಜಂಟಿ ಸಾರಿಗೆ ಆಯುಕ್ತರು, ಪೊಲೀಸ್ ಸಿಬ್ಬಂದಿಗಳು, ಗೃಹರಕ್ಷಕ ದಳ ಸಿಬ್ಬಂದಿಗಳು, ವಿವಿಧ ಸಂಘಟನೆಯ ಪದಾಧಿಕಾರಿಗಳು, ವಿವಿಧ ಶಾಲಾ, ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪುನೀತ್ ರಾಜಕುಮಾರ್ ವೃತ್ತದಲ್ಲಿ ಮರಿಯಮ್ಮನಹಳ್ಳಿ ರಂಗಚೌಕಿ ಕಲಾ ಟ್ರಸ್ಟ್‌ನಿಂದ ಬೀದಿ ನಾಟಕ ಪ್ರದರ್ಶಿಸಿದರು.

ಈ ಕಾರ್ಯಕ್ರಮದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿ ವಸಂತ ಈಶ್ವರ್ ಚವ್ಹಾಣ್, ಸಹಾಯಕ ಆಯುಕ್ತರಾದ ವಿವೇಕಾನಂದ, ಜಿಲ್ಲಾ ಹೆಚ್ಚುವರಿ ಪೋಲೀಸ್ ವರಿಷ್ಠಾಧಿಕಾರಿ ಸಲೀಂ ಪಾಷಾ, ಸಿದ್ದಪ್ಪ ಕಲ್ಲೇರ, ಡಿವೈಎಸ್‌ಪಿ ಕೆ.ಮಂಜುನಾಥ ಇತರರಿದ್ದರು.

## ಎನ್.ಪಿ.ಎಸ್ ರದ್ದುಗೊಳಿಸಿ ಹಳೆ ಪಿಂಚಣಿ ವ್ಯವಸ್ಥೆ ಜಾರಿಗೊಳಿಸಿ ತಾಲೂಕು ನೌಕರರ ಸಂಘ ಒತ್ತಾಯ



**ಹಂಪಿ ಟೈಮ್ಸ್ ಕೊಟ್ಟೂರು**

ಎನ್.ಪಿ.ಎಸ್ ರದ್ದುಗೊಳಿಸಿ ಹಳೆ ಪಿಂಚಣಿ ವ್ಯವಸ್ಥೆಯನ್ನು ಜಾರಿಗೊಳಿಸಬೇಕೆಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರಿಗೆ ಹಕ್ಕೊತ್ತಾಯಿಸಿ ಕ.ರಾ.ಸ. ಎನ್.ಪಿ.ಎಸ್ ನೌಕರರ ಸಂಘ ಕೊಟ್ಟೂರು ತಾಲೂಕು ಘಟಕವು ಶುಕ್ರವಾರ ತಹಶಿಲ್ದಾರ ಅಮರೇಶ್ ಜಿ.ಕೆ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಎನ್.ಪಿ.ಎಸ್ ವಿರುದ್ದ ಅನೇಕ ಪ್ರತಿಭಟನಾ ಹೋರಾಟಗಳು ನಡೆದಿದ್ದರೂ.ಸರ್ಕಾರ ಇದುವರೆಗೂ ಯಾವುದೇ ಕ್ರಮ ವಹಿಸದೇ ಕೇವಲ ಮಾತಿಗೆ ಸಮಿತಿ ರಚನೆ ಮಾಡಿದ್ದು ವರದಿ ನಿರೀಕ್ಷೆಯಲ್ಲಿದೆ ಎಂಬ ಸಬೂಬು ಹೇಳುತ್ತ ಜಾಣ ಮೌನ ವಹಿಸಿರುವುದು ಇಡೀ ನೌಕರರಿಗೆ ತಿಳಿದ ವಿಷಯವಾಗಿದೆ.

ಸಿದ್ದರಾಮಯ್ಯ ಸರ್ಕಾರವು ಚುನಾವಣೆ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ಜನಮನ್ನಣೆ ಪಡೆದಿದೆ, ಅದೇ ರೀತಿ ಎನ್.ಪಿ.ಎಸ್ ಯೋಜನೆ ರದ್ದುಪಡಿಸಿ 6ನೇ ಯೋಜನೆ ಓ.ಪಿ.ಎಸ್ ಜಾರಿಗೊಳಿಸಬೇಕೆಂದು ಆಗ್ರಹಿಸಿದರು.

ಅಂದಿನ ಸರ್ಕಾರ ಜಾರಿಮಾಡಿದ್ದ ಎನ್.ಪಿ.ಎಸ್ ಯೋಜನೆಯು 2006 ರ ನಂತರ ನೇಮಕವಾದ ಸರ್ಕಾರಿ ನೌಕರರ ಭವಿಷ್ಯಕ್ಕೆ ಭದ್ರತೆ ಇಲ್ಲದಂತಾಗಿದೆ ನೂತನ ಯೋಜನೆಯು ನೌಕರರ ಪಾಲಿಗೆ ಮಹಾಮಾರಿಯಾಗಿ ಪರಿಣಾಮಿಸಿದೆ ಈ ಹಿನ್ನೆಲೆ ಇದನ್ನು ಶೀಘ್ರ ರದ್ದು ಪಡಿಸಬೇಕೆಂದು ಒತ್ತಾಯಿಸಿ.

ಒಪಿಎಸ್ ಯೋಜನೆ ನೌಕರರ ಸಂದ್ಯಾ ಕಾಲದ ಬದುಕಿಗೆ ಆಶಾ ಕಿರಣ ಆಗಿದ್ದು ಶೀಘ್ರ ಇದನ್ನು ಜಾರಿಗೊಳಿಸಬೇಕೆಂದು ಕೊಟ್ಟೂರು ತಾಲೂಕು ಸರ್ಕಾರಿ ನೌಕರರ ಸಂಘವು ಸಮಸ್ತ ರಾಜ್ಯ ನೌಕರರ ಪರವಾಗಿ ಮನವಿ ಮಾಡಿಕೊಂಡಿತು.

ಈ ವೇಳೆ ತಾಲೂಕು ಘಟಕ ಎನ್.ಪಿ.ಎಸ್ ನೌಕರರ ಸಂಘದ ಅಧ್ಯಕ್ಷ ಚನ್ನೇಶಪ್ಪ ಎಸ್,ಕಾರ್ಯದರ್ಶಿಕಲ್ಯಾಣ ಕುಮಾರ ಎಸ್,ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು ಯೋಗೀಶ್ವರ ದಿನ್ನೆ,ಕಾರ್ಯದರ್ಶಿ ರಮೇಶ್ ಹಾಗೂಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಡಿ.ಎಸ್ ಮರುಳನಗೌಡ, ಕಾರ್ಯದರ್ಶಿ ಕೆ ಶಶಿಕಲಾ ಸಿ.ಆರ್.ಪಿ ಅಣಜಿ ಸಿದ್ದಲಿಂಗಪ್ಪ ಹಾಗೂ ಸರ್ಕಾರಿ ನೌಕರರ ಸಂಘದ ಸರ್ವ ಸದಸ್ಯರು ಹಾಜರಿದ್ದರು

